ಭಕ್ತಕವಿ ಶ್ರೀಮಾನ್ ಕೆ. ವಿ. ವರದರಾಜ ಐಯ್ಯಂಗಾರ್ ವಿರಚಿತ ಸಂಪೂರ್ಣ ಕನ್ನಡ ಭಾಗವತದ ಹಿರಿಮೆ ಕುರಿತು ಒಂದು ಕಿರುಲೇಖನ

ಡಾ. ಪಿ. ರಾಮಾನುಜನ್, ಬೆಂಗಳೂರು

ಉಪೋದ್ಘಾತ

ಭಾರತ ಸಂಸ್ಕೃತಿ ಪ್ರತಿಷ್ಠಾನದ ನಿರ್ವಾಹಕರಾದ ಶ್ರೀ. ಬಿ. ಎನ್. ಮೂರ್ತಿಯವರ ಪ್ರಾರ್ಥನೆಯಂತೆ ಸಂಪೂರ್ಣ ಕನ್ನಡ ಭಾಗವತದ ಬಗ್ಗೆ ವಿಚಾರ ಸಂಕಿರಣವನ್ನೂ, ಅದರ ವಿಷಯಕವಾದ ಅಭಿನಂದನಾ ಗ್ರಂಥವನ್ನೂ ಪ್ರಕಾಶಿಸಿ, ಶ್ರೀಮಾನ್ ಕೆ. ವಿ. ವರದರಾಜ ಅಯ್ಯಂಗಾರ್ ಅವರ ಸನ್ಮಾನವನ್ನೂ ಮಾಡುವುದಾಗಿ ತಿಳಿಸಿ, ಆ ಅಭಿನಂದನಾ ಗ್ರಂಥಕ್ಕಾಗಿ ಒಂದು ಲೇಖನವನ್ನು ಬರೆಯ ಬೇಕೆಂದದ್ದರಿಂದ ಈ ಲೇಖನ ಬರೆಯಲಾಗಿದೆ.

ಉದ್ಧವಗೀತೆ ಪ್ರಕರಣ

ಶ್ರೀಮದ್ಭಾಗವತದಲ್ಲಿ ಹನ್ನೊಂದನೇಯ ಸ್ಕಂಧದ 6ನೇ ಅಧ್ಯಾಯದಿಂದ ಶ್ರೀಕೃಷ್ಣ ಪರಮಾತ್ಮನು ತನ್ನ ಅವತಾರ-ವನ್ನು ಸಮಾಪನೆ ಮಾಡಿಕೊಂಡು ತನ್ನ ದಿವ್ಯಧಾಮವಾದ ಶ್ರೀವೈಕುಂಠಕ್ಕೆ ತೆರಳುವ ಮುನ್ನ ತನ್ನ ಭಕ್ತನೂ ಅಂತರಂಗ ಸೇವಕನೂ ಆದ ಶ್ರೀ ಉದ್ಧವನಿಗೆ ಕೆಲವು ಉಪದೇಶಗಳನ್ನು ಮಾಡಿದನು. ಅದರ ಬಗ್ಗೆ 6, 7, 8 ಮತ್ತು 9ನೇಯ ಅಧ್ಯಾಯಗಳಲ್ಲಿ ಉದ್ಧವಗೀತೆಗೆ ಸಿದ್ಧತೆಗಳು ಮತ್ತು ಅವಧೂತ ಉಪಾಖ್ಯಾನ ಎಂಬುದರಿಂದ ಇಲ್ಲಿ ವಿಶ್ಲೇಷಿಸಲಾಗು-ವುದು. ಭಾಗವತ ಮೂಲ (ಸಂಸ್ಕೃತ) ಶ್ಲೋಕಗಳು, ಮತ್ತು ಐಯ್ಯಂಗಾರರ ಕನ್ನಡೀಕರಣಗಳನ್ನು ಹೋಲಿಸಿಸುವುದು ಇಲ್ಲಿನ ಉದ್ದೇಶವು. ಈ ಪ್ರಕರಣದ ಕೆಲವು ಆಯ್ದ ಶ್ಲೋಕಗಳಲ್ಲಿ ವಿಚಾರ ಮಾಡಲಾಗುವುದು.

ಅಧ್ಯಾಯ - ೬ - ಅ. ವಿಷಯಸಂಗ್ರಹ (ಶ್ಲೋ. 1-27)

ಈ ಅಧ್ಯಾಯದಲ್ಲಿ ದೇವತೆಗಳು ಶ್ರೀಕೃಷ್ಣನನ್ನು ವೈಕುಂಠಕ್ಕೆ ಆಹ್ವಾನಿಸಿದ ವೃತ್ತಾಂತ ಹೇಳಿದೆ - ಅನಂತರ ಬ್ರಹ್ಮ-ದೇವನು, ಸನಕ ಮುಂತಾದ ತನ್ನ ಪುತ್ರರೊಡನೂ, ಮರೀಚಿ ಮುಂತಾದ ಪ್ರಜಾಪತಿಗಳೊಡನೂ, ತನ್ನ ಗಣಗಳೊಂದಿಗೆ ಎಲ್ಲ ಪ್ರಜೆಗಳಿಗೂ ಅಧಿಪನಾದ ಪರಮಶಿವನೊಡನೂ, ಇಂದ್ರ, ಆದಿತ್ಯರು, ವಸುಗಳು, ಅಶ್ವಿನಿ ದೇವತೆಗಳು, ಋಭುಗಳು, ಅಂಗಿರಸ್ಸುಗಳು, ರುದ್ರರು, ವಿಶ್ವೇದೇವರು, ಸಾಧ್ಯರು, ಗಂಧರ್ವರು, ಅಪ್ಸರಸ್ಸುಗಳು, ನಾಗರು, ಸಿದ್ಧರು, ಚಾರಣರು, ಗುಹ್ಯಕರು, ಋಷಿಗಳು, ಪಿತೃಗಳು, ವಿದ್ಯಾಧರರು, ಕಿನ್ನರರು ಮೊದಲಾಗಿ ಎಲ್ಲ ದೇವಯೋನಿಯರೂ ಶ್ರೀಕೃಷ್ಣನನ್ನು ನೋಡಬೇಕೆಂಬ ಹೆಬ್ಬಯಕೆಯಿಂದ ದ್ವಾರಕಾಪಟ್ಟಣಕ್ಕೆ ತೆರಳಿದರು. ಇವರೆಲ್ಲರೂ ಪದೇಪದೇ ಶ್ರೀಮನ್ನಾರಾಯಣ-ನನ್ನು ದರ್ಶನ ಮಾಡುವರಾದಾಗ್ಯೂ ಆ ಭಗವಂತನು ಶ್ರೀಕೃಷ್ಣನಾಗಿ ಭೂಮಿಯಲ್ಲಿ ಅವತರಿಸಿ ಸಕಲಮನುಜನಯನ-ವಿಷಯನಾಗಿ ಅವರ ಪಾಪಗಳನ್ನು ಪರಿಹರಿಸಿ, ಅವರ ಕೋರಿಕೆಗಳನ್ನೆಲ್ಲಾ ಈಡೇರಿಸಿ, ತನ್ನಲ್ಲಿ ಜ್ಞಾನ, ಭಕ್ತಿಭಾವಾದಿ-ಗಳನ್ನು ಬ್ರಹ್ಮಸಾಯುಜ್ಯಕ್ಕೆ ಅನುವಾಗುವಂತೆ ಮಾಡುತ್ತ ಅವನ ಕೀರ್ತಿಯು ಸರ್ವದಿಗಂತಗಳಲ್ಲೂ ವ್ಯಾಪಿಸಿರುವುದರಿಂದ ಆ ಸ್ವರೂಪವನ್ನು ನೇರ ಕಂಡು ಆನಂದಿಸಲು, ಸರ್ವಸಂಪತ್ಸಮೃದ್ಧವಾದ ಶ್ರೀದ್ವಾರಕಾಪುರಿಗೆ ಬಂದು, ಆ ಪರಮಾ-ದ್ಭುತವಾದ ದಿವ್ಯಸ್ವರೂಪವನ್ನು ಕಂಡು ವಿಸ್ಮಿತರಾಗಿ, ತೃಪ್ತಿಯೇ ಉಂಟಾಗದೆ ದೇವಲೋಕದ ಪಾರಿಜಾತಪುಷ್ಪ-ಮಾಲೆಗಳಿಂದ ಶ್ರೀಕೃಷ್ಣನನ್ನರ್ಚಿಸಿ, ಅವನ ದೇಹ ಪೂರ್ಣವಾಗಿ ಮರೆಯಾಗುವಂತೆ ಪುಷ್ಪಗಳನ್ನು ಸಮರ್ಪಿಸಿ, ನಾನಾಬಗೆಯ ವಿಚಿತ್ರ ಪದ, ಅರ್ಥಗಳುಳ್ಳ ಶ್ಲೋಕಗಳಿಂದ ಜಗದೀಶನಾದ ಕೃಷ್ಣನನ್ನು ಇಂತು ಸ್ತುತಿಸಿದರು.

ಹೇ ನಾಥ, ಕರ್ಮವೆಂಬ ಪಾಶದಿಂದ ಬಿಡಿಸಿಕೊಳ್ಳಲು ಜನರು ನಿಮ್ಮಲ್ಲೇ ಮನಸ್ಸನ್ನು ಇರಿಸಿ ನಿಮ್ಮ ಪಾದಾರವಿಂದಗಳನ್ನೇ ಹೃದಯದಲ್ಲಿ ಧ್ಯಾನಿಸುವರು. ಅಂತಹ ಪಾದಗಳನ್ನು ಬುದ್ಧಿ, ಇಂದ್ರಿಯ, ಪ್ರಾಣ, ಮನಸ್ಸು, ವಾಕ್ ಇವುಗಳಿಂದ ನಮಿ-ಸುತ್ತೇವೆ. (ಕೈಗಳು, ಕಾಲುಗಳು, ಮೊಣಕಾಲುಗಳು, ಎದೆ, ತಲೆ, ಕಂಗಳು, ಮನಸ್ಸು, ವಾಕ್ ಇವುಗಳಿಂದ ನಮಸ್ಕರಿಸುವು-ದಕ್ಕೇ ಅಷ್ಟಾಂಗ ನಮಸ್ಕಾರ ಎನ್ನಲಾಗುತ್ತದೆ. ಯೋಗಿಗಳು ಹೃದಯದಲ್ಲಿ ಮಾತ್ರ ನಿಮ್ಮನ್ನು ಕಾಣುವರು. ನಾವು ನೇರವಾಗಿ (ಸಾಕ್ಷಾತ್ತಾಗಿ) ನೋಡುವುದರಿಂದ ನಮ್ಮ ಭಾಗ್ಯವು ಹೆಚ್ಚಿಂದು ಬಾವ).

ಯಾ(ವುದ)ರಿಂದಲೂ ಜಯಿಸಲಾಗದವನೇ, ನೀನು ಆವರಣವಿಲ್ಲದ ಆತ್ಮಸುಖದಲ್ಲಿ ರಮಿಸಿತ್ತಿರುವವನು. ಆಸೆ ಮುಂತಾದವು ನಿನಗಿಲ್ಲ. ಮಾಯೆಯ ಗುಣಗಳಿಗೆ ಸ್ವಾಮಿಯು ನೀನೇ. ಆದ್ದರಿಂದ ತ್ರಿಗುಣಾತ್ಮಕ ಮಾಯೆಯಿಂದ ಈ

ಪ್ರಪಂಚವನ್ನು ತನ್ನಲ್ಲೇ ಸೃಷ್ಟಿ ಮಾಡಿ, ಸಂರಕ್ಷಿಸಿ, ಸಂಹರಿಸುವೆ. ಆ ಪ್ರಪಂಚವು ಮನಸ್ಸಿಂದಲೂ ಅಚಿಂತ್ಯವು. ನೀನು ಮಾಯೆಗೆ ಅಧಿಪತಿಯಾದ್ದರಿಂದ ನಿನಗೆ ಕರ್ಮಬಂಧವಿಲ್ಲ. (ನೀನು ಕರ್ಮಗಳನ್ನು ಮಾಡುತ್ತಿದ್ದಾಗಲೂ ಆತ್ಮಾರಾಮನಾಗಿರುವುದರಿಂದ ಮೋಕ್ಷೇಚ್ಛುಗಳು ನಿಮ್ಮನ್ನು ಧ್ಯಾನಿಸುವರು).

ಎಲ್ಲರಿಂದಲೂ ಸ್ತುತ್ಯನೇ, ನಿನ್ನ ಚರಿತವನ್ನು ಶ್ರದ್ಧೆಯಿಂದ ಆಲಿಸಿಯೂ, ನಿನ್ನ ಕಲ್ಯಾಣತಮವಾದ ರೂಪ ಸಂದರ್ಶನದಿಂದಾಗುವ ಶುದ್ಧಿಯು ಜನಕ್ಕೆ ಉಪಾಸನೆ, ವೇದ, ಶಾಸ್ತ್ರಗಳ ಅಧ್ಯಯನ, ದಾನ, ತಪಸ್ಸು, ಯಾಗ ಮುಂತಾದವುಗಳಿಂದ ಆಗದೆಂದು (ಪರಮಾತ್ಮನು ಎಲ್ಲರನ್ನೂ ಪವಿತ್ರಗೊಳಿಸುವ ಸಲುವಾಗಿಯೇ ತನ್ನ ಅನೇಕ ಲೀಲೆಗಳನ್ನು ಮಾಡಿ, ಸತ್ಕೀರ್ತಿಃ, ಪುಣ್ಯಶ್ರವಣಕೀರ್ತನಃ ಎಂಬಂತೆ ಕೀರ್ತಿಯನ್ನು ಹರಡಿಸುವನು) ವಿಜ್ಞಾಪಿಸಿದರು. ಹೇ ಭಗವಂತನೇ, ನಿನ್ನ ಪಾದಗಳನ್ನು, ಮೋಕ್ಷವನ್ನು ಪಡೆಯ ಬಯಸಿ, ಮಹರ್ಷಿಗಳು ಬಹಳ ಭಕ್ತಿಯಿಂದ ಹೃದಯದಲ್ಲಿ ಧ್ಯಾನಿಸುವರು. ಭಕ್ತಾದಿಗಳು ನಿನಗೆ ಸಮನಾದ ಮಾಹಾತ್ಮ್ಯವನ್ನು ಪಡೆಯಲು ವಾಸುದೇವ ಮುಂತಾದ ವ್ಯೂಹಗಳ ಉಪಾಸನೆಯಿಂದ ಪೂಜಿಸುವರು. ಅವರಲ್ಲೂ ಆತ್ಮಯಾಥಾರ್ಥ್ಯಜ್ಞಾನಿಗಳು ಕೆಲವರು ಸ್ವರ್ಗವನ್ನೂ ದಾಟಿ, ಶ್ರೀವೈಕುಂಠವನ್ನು ಪಡೆಯಲೆಂದು ತ್ರಿಕಾಲಗಳಲ್ಲೂ ಪೂಜಿಸುವರು.

ಅಂತಹ ನಿನ್ನ ಪಾದಕಮಲಗಳು ನಮ್ಮ ವಿಷಯವಾಸನೆಗಳನ್ನು ನಾಶಗೊಳಿಸಲಿ. ಜಗದೀಶ್ವರನೇ, ಬ್ರಾಹ್ಮಣೋತ್ತಮರು ಆಹವನೀಯ ಮುಂತಾದ ಯಾಗಾಗ್ನಿಗಳಲ್ಲಿ ಹೋಮಮಾಡಲು ಹವಿಸ್ಸನ್ನು ಎರಡೂ ಕೈಗಳಲ್ಲೂ ವೇದೋಕ್ತವಾಗಿ ವಿಧಿವತ್ತಾಗಿ ತೆಗೆದು ಕೊಂಡು ಇಂದ್ರ ಮುಂತಾದವರ ಸ್ವರೂಪವಾಗಿ ಯಾವುದನ್ನು ಧ್ಯಾನಿಸಿ, ಆಯಾ ದೇವತೆಗಳನ್ನು ಉದ್ದೇಶಿಸಿ ವಷಟ್ಕಾರದೊಡನೆ ಕೊಡುವರೋ, ಯೋಗಿಗಳೂ ನಿನ್ನ ಮಾಯೆಯನ್ನು ತಿಳಿಯಲು ಇಚ್ಛಿಸಿ ಆತ್ಮಯೋಗದಲ್ಲಿ ಯಾವುದನ್ನು ಧ್ಯಾನಿಸುವರೋ, ಮುಕ್ತರಾದ ಭಾಗವತರು, ಯಾವುದನ್ನು ಸೇವಿಸುವರೋ, ಅಂತಹ ನಿನ್ನ ಪಾದವು ನಮ್ಮ ಕರ್ಮಗಳನ್ನು ನಿರ್ಮೂಲವಾಗಿಸಲಿ. ನೀನು ಭಕ್ತರಿಂದ ಸಮರ್ಪಿಸಲ್ಪಟ್ಟ ವನಮಾಲೆಯನ್ನು ಧರಿಸಿರುವೆ. ಮಹಾಲಕ್ಷ್ಮಿ ಕೂಡ ಆ ವನಮಾಲೆಯಲ್ಲಿ ಸವತಿಯಂತೆ ಅಸೂಯೆ ಪಡುವಳು. ಆದರೂ ನೀನು ಲಕ್ಷ್ಮಿಯನ್ನು ಲೆಕ್ಕಿಸದೆ ಭಕ್ತರು ಕೊಟ್ಟುದೆಂದು ಆ ಮಾಲೆಯನ್ನು ಧರಿಸಿ ಆನಂದಿಸುವೆ. ಅಂತಹ ನಿನ್ನ ಪಾದಕಮಲಗಳು ಕರ್ಮದ ಕೆಟ್ಟವಾಸನೆಯನ್ನು ದಹಿಸುವ ಅಗ್ನಿಯಾಗಲಿ. ನಿನ್ನ ಅಮೃತಮಯ ಕೀರ್ತಿಯೆಂಬ ಜಲಪ್ರವಾಹವಾದ ನದಿಯೂ, ನಿನ್ನ ಪಾದದಿಂದ ಉದ್ಭವಿಸಿದ ಗಂಗಾದಿನದಿಗಳೂ, ಮೂರೂ ಲೋಕಗಳ ಪಾಪಗಳನ್ನು ಹೋಗಲಾಡಿಸಲು ಸಮರ್ಥವಾಗಿವೆ. ಆತ್ಮಶುದ್ಧಿಯನ್ನು ಬಯಸುವ ಸಾಧಕರು ವೇದಗಳು ಕೊಂಡಾಡುವ, ತಮ್ಮ ಚರಣದಿಂದುಂಟಾದ ಈ ಎರಡು ಬಗೆಯ ನೀರನ್ನೂ ಕಿವಿ ಮತ್ತು ಮಿಕ್ಕ ಅಂಗಗಳಿಂದಲೂ ಸ್ಪರ್ಶಿಸಿ ಪೂಜಿಸುವರು.

ಹೀಗೆ ಬ್ರಹ್ಮನು ಶಿವ ಮತ್ತು ದೇವತೆಗಳೊಡನೆ ಶ್ರೀಹರಿಯನ್ನು ಸ್ತುತಿಸಿ, ನಮಸ್ಕರಿಸಿ ಆಕಾಶದಲ್ಲಿಂದ ಗೋವಿಂದನನ್ನು ಕುರಿತು ಇಂತೆಂದನು -

ಹೇ ಪ್ರಭೋ, ಸರ್ವಾತ್ಮನೆ, ಹಿಂದೆ ಭೂಮಿಯ ಭಾರವನ್ನು ಇಳಿಸಲು ನಮ್ಮ ಬೇಡಿಕೆಯಿಂದ, ನೀನು ಹಾಗೆಯೇ ನಡೆಸಿ ಕೊಟ್ಟಿರುವೆ. ಸತ್ಯಸಂಧರಾದ ಸತ್ಪುರುಷರಲ್ಲಿ ಧರ್ಮವನ್ನೂ ಸ್ಥಾಪನೆ ಮಾಡಿದೆ. ಎಲ್ಲ ಲೋಕಗಳ ದೋಷಗಳನ್ನು ದೂರಮಾಡುವ ನಿನ್ನ ಕೀರ್ತಿಯೂ ದಿಗಂತಗಳಲ್ಲೆಲ್ಲ ಹರಡಿದೆ. ಅತ್ಯುತ್ತಮವಾದ ದಿವ್ಯರೂಪವನ್ನು ಧರಿಸಿ ಯದುವಂಶದಲ್ಲಿ ಅವತರಿಸಿ ಜಗತ್ತಿನ ಹಿತಕ್ಕಾಗಿ ಪರಾಕ್ರಮಗೂಡಿದ ಹಲವು ಲೀಲೆಗಳನ್ನು ಮಾಡಿರುವೆ. ಒಡೆಯನೆ, ಕಲಿಯುಗದಲ್ಲಿ ಸಾಧು(ಭಕ್ತ)ಜನರು ಈ ನಿನ್ನ ದಿವ್ಯ ಚರಿತೆಗಳನ್ನು ಕೇಳಿ, ಹೇಳಿ ಅದರಿಂದ ಸಂಸಾರಕ್ಕೆ ಕಾರಣವಾದ ಅಜ್ಞಾನವನ್ನು ಸುಲಭವಾಗಿ ದಾಟುವರು. ಯದುವಂಶದಲ್ಲಿ ನೀನವತರಿಸಿ ಈಗ 125 ವರ್ಷಗಳಾದವು. ಸರ್ವಾಧಾರನೆ, ಇನ್ನು ದೇವಕಾರ್ಯವು ಯಾವುದೂ ಉಳಿದಿಲ್ಲ. ಯಾದವಕುಲವೂ ಬ್ರಾಹ್ಮಣ ಶಾಪದಿಂದ ಸಂಪೂರ್ಣವಾಗಿ ನಷ್ಟವಾಗಿದೆ. ವೈಕುಂಠನೆ, ಆದ್ದರಿಂದ ನೀನು ಇಚ್ಛಿಸಿದರೆ ನಿನ್ನ ಪರಮಧಾಮವಾದ ಶ್ರೀವೈಕುಂಠಕ್ಕೆ ಹಿಂತಿರುಗಿ. ತಮ್ಮ ದಾಸರಾದ ನಮ್ಮನ್ನು ಈ ಲೋಕಗಳೊಡನೆ ರಕ್ಷಿಸು.

ಆ. ಮೂಲ ಸಂಸ್ಕೃತ ಶ್ಲೋಕಗಳು

(श्रीमद्भागवते एकादशस्कन्धे) षष्ठोऽध्यायः

श्रीशुक उवाच

अथ ब्रह्मात्मजैः देवैः प्रजेशैरावृतोऽभ्यगात् । भवश्च भूतभव्येशो ययौ भूतगणैर्वृतः ॥ १ ॥

इन्द्रो मरुद्भिर्भगवानादित्या वसवोऽश्विनौ । ऋभवोऽङ्गिरसो रुद्रा विश्वे साध्याश्च देवताः ॥ २ ॥

गन्धर्वाप्सरसो नागाः सिद्धचारणगुह्यकाः । ऋषयः पितरश्चैव सविद्याधरकिन्नराः ॥ ३ ॥

द्वारकामुपसञ्जग्मुः सर्वे कृष्णदिदृक्षवः । वपुषा येन भगवान् नरलोकमनोरमः ।
यशो वितेने लोकेषु सर्वलोकमलापहम् ॥ ४ ॥

तस्यां विभ्राजमानायां समृद्धायां महर्द्धिभिः । व्यचक्षतावितृप्ताक्षाः कृष्णमद्भुतदर्शनम् ॥ ५ ॥

स्वर्गोद्यानोपगैर्माल्यैश्छादयन्तो यदूत्तमम् । गीर्भिश्चित्रपदार्थाभिस्तुष्टुवुर्जगदीश्वरम् ॥ ६ ॥

श्रीदेवा ऊचुः

नताः स्म ते नाथ पदारविन्दं बुद्धीन्द्रियप्राणमनोवचोभिः ।
यच्चिन्त्यतेऽन्तर्हृदि भावयुक्तैर्मुमुक्षुभिः कर्ममयोरुपाशात् ॥ ७ ॥

त्वं मायया त्रिगुणयात्मनि दुर्विभाव्यं व्यक्तं सृजस्यवसि लुम्पसि तद्गुणस्थः ।
नैतैर्भवानजित कर्मभिरज्यते वै यत्स्वे सुखेऽव्यवहितेऽभिरतोऽनवद्यः ॥ ८ ॥

शुद्धिर्नृणां न तु तथेड्य दुराशयानां विद्याश्रुताध्ययनदानतपःक्रियाभिः ।
सत्त्वात्मनामृषभ ते यशसि प्रवृद्धसच्छ्रद्धया श्रवणसम्भृतया यथा स्यात् ॥ ९ ॥

स्यान्नस्तवाङ्घ्रिरशुभाशयधूमकेतुः क्षेमाय यो मुनिभिरार्द्रहृदोह्यमानः ।
यः सात्वतैः समविभूतय आत्मवद्भिर्व्यूहेऽर्चितः सवनशः स्वरतिक्रमाय ॥ १० ॥

यश्चिन्त्यते प्रयतपाणिभिरध्वराग्नौ त्रय्या निरुक्तविधिनेश हविर्गृहीत्वा ।
अध्यात्मयोग उत योगिभिरात्ममायां जिज्ञासुभिः परमभागवतैः परीष्टः ॥ ११ ॥

पर्युष्टया तव विभो वनमालयेयं संस्पर्धिनी भगवती प्रतिपत्निवच्छ्रीः ।
यः सुप्रणीतममुयार्हणमाददन्नो भूयात्सदाङ्घ्रिरशुभाशयधूमकेतुः ॥ १२ ॥

केतुस्त्रिविक्रमयुतस्त्रिपतत्पताको यस्ते भयाभयकरोऽसुरदेवचम्वोः ।
स्वर्गाय साधुषु खलेष्वितराय भूमन् पादः पुनातु भगवन्भजतामघं नः ॥ १३ ॥

नस्योतगाव इव यस्य वशे भवन्ति ब्रह्मादयस्तनुभृतो मिथुरर्द्यमानाः ।
कालस्य ते प्रकृतिपूरुषयोः परस्य शं नस्तनोतु चरणः पुरुषोत्तमस्य ॥ १४ ॥

अस्यासि हेतुरुदयस्थितिसंयमानाम् अव्यक्तजीवमहतामपि कालमाहुः ।
सोऽयं त्रिणाभिरखिलापचये प्रवृत्तः कालो गभीररय उत्तमपूरुषस्त्वम् ॥ १५ ॥

त्वत्तः पुमान्समधिगम्य यथास्य वीर्यं धत्ते महान्तमिव गर्भममोघवीर्यः ।
सोऽयं तयानुगत आत्मन आण्डकोशं हैमं ससर्ज बहिरावरणैरुपेतम् ॥ १६ ॥

तत्तस्थुषश्च जगतश्च भवानधीशो यन्माययोत्थगुणविक्रिययोपनीतान् ।
अर्थाञ्जुषन्नपि हृषीकपते न लिप्तो येऽन्ये स्वतः परिहृतादपि बिभ्यति स्म ॥ १७ ॥

स्मायावलोकलवदर्शितभावहारिभ्रूमण्डलप्रहितसौरतमन्त्रशौण्डैः ।
पत्न्यस्तु षोडशसहस्रमनङ्गबाणैर्यस्येन्द्रियं विमथितुं करणैर्न विभ्व्यः ॥ १८ ॥

विभ्व्यस्तवामृतकथोदवहास्त्रिलोक्याः पादावनेजसरितः शमलानि हन्तुम् ।
आनुश्रवं श्रुतिभिरङ्घ्रिजमङ्गसङ्गैस्तीर्थद्वयं शुचिषदस्त उपस्पृशन्ति ॥ १९ ॥

श्रीबादरायणिरुवाच

इत्यभिष्टूय विबुधैः सेशः शतधृतिर्हरिम् । अभ्यभाषत गोविन्दं प्रणम्याम्बरमाश्रितः ॥ २० ॥

श्रीब्रह्मोवाच

भूमेर्भारावताराय पुरा विज्ञापितः प्रभो । त्वमस्माभिरशेषात्मंस्तत्तथैवोपपादितम् ॥ २१ ॥

धर्मश्च स्थापितः सत्सु सत्यसन्धेषु वै त्वया । कीर्तिश्च दिक्षु विक्षिप्ता सर्वलोकमलापहा ॥ २२ ॥

अवतीर्य यदोर्वंशे बिभ्रद्रूपमनुत्तमम् । कर्माण्युद्दामवृत्तानि हिताय जगतोऽकृथाः ॥ २३ ॥

यानि ते चरितानीश मनुष्याः साधवः कलौ । शृण्वन्तः कीर्तयन्तश्च तरिष्यन्त्यञ्जसा तमः ॥ २४ ॥

यदुवंशेऽवतीर्णस्य भवतः पुरुषोत्तम । शरच्छतं व्यतीयाय पञ्चविंशाधिकं प्रभो ॥ २५ ॥

नाधुना तेऽखिलाधार देवकार्यावशेषितम् । कुलं च विप्रशापेन नष्टप्रायमभूदिदम् ॥ २६ ॥

ततः स्वधाम परमं विशस्व यदि मन्यसे । सलोकाँल्लोकपालान्नः पाहि वैकुण्ठकिङ्करान् ॥ २७ ॥

೩. 1. ಐಯ್ಯಂಗಾರರ ಕನ್ನಡೀಕರಣ - ಉದ್ಧವಗೀತೆಗೆ ಸಿದ್ಧತೆಗಳು

ಶ್ರೀಶುಕಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ನಾರದರು ಭಾಗವತ ಧರ್ಮವ ಬೋಧಿಸಿ
ಹೊರಟಿರಲು, ವಸುದೇವ ತಾನು ಸನಕಾದಿಯ ಕೂಡಿಯೇ ೧೨,೦೬೬

ದ್ವಾರಕೆಗೆ ಬಂದಿರಲು ಅವನೊಡೆ ಪ್ರಜಾಪತಿಗಳು, ರುದ್ರನೂ
ಮರುದ್ಗಣಗಳು, ಇಂದ್ರ, ದ್ವಾದಶ ಆದಿತ್ಯರೂ ಬಂದಿರೆ ೧೨,೦೬೭

ಅಷ್ಟವಸುಗಳು, ಅಶ್ವಿನಿಗಳೂ, ಋಭು, ಅಂಗಿರಸ, ಸಾಧ್ಯರೂ
ವಿಶ್ವೇದೇವತೆ, ನಾಗರೂ, ಗಂಧರ್ವ, ಅಪ್ಸರೆ, ಚಾರಣ ೧೨,೦೬೮

ಮುನಿಗಳು, ಋಷಿ, ಪಿತೃಗಳೂ, ಕಿನ್ನರರು, ವಿದ್ಯಾಧರರೊಡೆ
ಕೃಷ್ಣನನು ಸಂದರ್ಶಿಸುವ ಸಲುವಾಗಿ ಸೇರಿರಲೊಮ್ಮೆಗೇ ೧೨,೦೬೯

ಎಲ್ಲ ಸಿರಿ-ಸಂಪದವ ಕೂಡಿಯೆ ಬೆಳಗುತಿಹ ದ್ವಾರಕೆಯಲಿ
ಎಲ್ಲರೂ ನೋಡಿದರು ಕೃಷ್ಣನ ತೃಪ್ತಿಯೆಂಬುದನರಿಯದೆ ೧೨,೦೭೦

ಅಲಂಕರಿಸುತ ಕೃಷ್ಣನನ್ನು ವಿವಿಧ ಸುರತರುಪುಷ್ಪದಿಂ
ನಲಿದು ಸವಿಮಾತಿನಲಿ ಸ್ತುತಿಸುತ ನುಡಿದರೆಲ್ಲರು ಈಪರಿ ೧೨,೦೭೧

"ಕರ್ಮಪಾಶಗಳನ್ನು ಕಡಿಯುತ ಮೋಕ್ಷಬಯಸುವ ಜನಗಳು
ಪರಮಭಕ್ತಿಯೊಳಿಂದ ನಿನ್ನಯ ಚರಣಗಳ ಚಿಂತಿಸುವರು ೧೨,೦೭೨

ಅದುವೆ ಚರಣಗಳನ್ನು ನಾವೂ ಮಾತು, ಮನ, ಪ್ರಾಣಗಳಲಿ
ಬುದ್ಧಿ, ಇಂದ್ರಿಯಗಳನ್ನು ಕೂಡಿಯೆ ನಮಿಸುತಿರುವೆವು ದೇವನೇ! ೧೨,೦೭೩

ತ್ರಿಗುಣಗಳ ಕೂಡುತಲಿ ವಿಶ್ವವ ಸಷವಾಗಿಯೆ ಸೃಷ್ಟಿಸಿ
ತಂದೆ! ಪಾಲಿಸಿ, ಲಯವಗೊಳಿಸುವ ಕರ್ಮಗಳಿಗಂಟದೆಯೆ ನೀ ೧೨,೦೭೪

ರಾಗ-ದ್ವೇಷಗಳೆಂಬ ದೋಷಗಳಿಂದ ದೂರಾಗಿರುತಲಿ
ಮಗ್ನನಾಗಿಹೆ ಸತತ ಆತ್ಮಾನಂದದಲಿ ಪುರಪುರುಷನೇ ೧೨,೦೭೫

ನಿನ್ನ ಲೀಲೆಯ-ಯಶಗಳನ್ನೂ ಗಾನಮಾಡುವ ಜನರಲಿ
ದಿನದಿನವು ಬೆಳೆದಿರಲು ಶ್ರದ್ಧೆಯು ಚಿತ್ತಶುದ್ಧಿಯು ಬರುವುದು ೧೨,೦೭೬

ಮನನ ಶೀಲರು ಮಹಾಮುನಿಗಳು ಪಡೆಯೆ ಮೋಕ್ಷವ ಬೇಗನೆ
ಪ್ರೇಮದಿಂದಲಿ ಆರ್ದ್ರಹೃದಯದಿ ನಿನ್ನ ಪದಗಳ ನೆನೆವರು ೧೨,೦೭೭

ಪಾಂಚರಾತ್ರದ ವಿಧಿಯೊಳವರು ವಾಸುದೇವ-ಸಂಕರ್ಷಣ

ಪ್ರದ್ಯುಮ್ನ ಅನಿರುದ್ಧರ ವ್ಯೂಹದಲಿ ಅರ್ಚಿಸುವರು ೧೨,೦೭೮

ಯಾವ ಪಾದುಕೆಗಳನು ಧೀರರು ಹರಿಯ ಧಾಮವ ಸೇರಲು
ಎಲ್ಲ ಕಾಲಗಳಲ್ಲು ಪೂಜಿಸಿ ಧ್ಯಾನಿಪರೊ ಮನದಲ್ಲಿಯೇ ೧೨,೦೭೯

ನಿನ್ನ ಮಾಯೆಯ ತಿಳಿಯೆ ಅಧ್ಯಾತ್ಮದ ಯೋಗದಿ ಜನಗಳು
ಧ್ಯಾನಮಾಡಿಯೆ ಮುಳುಗುವರೋ ಆ ಪಾದುಕೆಗಳಲಿ ಸತತವೂ ೧೨,೦೮೦

ನಿನ್ನ ಚರಣಗಳೆರಡು ನಮ್ಮನು ಪಾವನರಗೊಳಿಸುತ್ತಲಿ
ನಮ್ಮ 'ವಿಷಯ'ದ ವಾಸನೆಗಳನ್ನು ತೊಳೆದುಹಾಕಲಿ ಬೇಗನೆ ೧೨,೦೮೧

ಕಂಠದಿಂದಲಿ ಪಾದಗಳವರೆಗಿರುವ ಈ ವನಮಾಲೆಯು
ತುಂಬಿ ಶೋಭಿಸೆ ಎದೆಯೊಳಿಹ ರಮೆ ಸವತಿಮತ್ಸರದಿಂದಿರೆ ೧೨,೦೮೨

ರಮೆಯ ಅಸಹನೆಯನ್ನು ನೋಡದೆ ಭಕ್ತರಿತ್ತಿಹ ಮಾಲೆಯ
ತುಂಬುಮನದಲಿ ನೀನು ಧರಿಸಿರೆ ಧನ್ಯವದು ವನಮಾಲೆಯು ೧೨,೦೮೩

ಮಾಲೆಯಿಂದಲಿ ಅಲಂಕೃತವಾಗಿರುವ ಚರಣಗಳಿಂದಲಿ
ಲೀಲೆಯಿಂದಲೆ ನಮ್ಮ ವಾಸನೆಗಳನು ಬೂದಿಯ ಮಾಡು ನೀ ೧೨,೦೮೪

ವಾಮನನ ಅವತಾರದಲಿ ಬಲಿಯಿತ್ತ ಮೂರೇ ಹೆಜ್ಜೆಯ
ಭೂಮಿಯನು ಅಳೆಯುತ್ತ ಎರಡನೆ ಕಾಲ ನೀ ಮೇಲೆತ್ತಿರೆ ೧೨,೦೮೫

ನಿನ್ನ ಪಾದವು ವಿಜಯ ಬಾವುಟದಂತೆ ಕಾಣುತ ಬೆಳಗಿರೆ
ತನ್ನ ಲೋಕಕೆ ಬಂದ ಪಾದವ ಬ್ರಹ್ಮ ತೊಳೆದಿರಲಾಗಲೇ ೧೨,೦೮೬

ಪಾದತೀರ್ಥವು 'ಗಂಗೆ' ಎನಿಸಿರೆ ಹರಿಯ ಧಾರೆಯು ಮೂರಲಿ
ಪಾದಗಳ ಬಾವುಟಗಳಂದದಿ ಕಾಣುತಿರೆ ಧಾರೆಗಳು ತಾ ೧೨,೦೮೭

ನಿನ್ನ ಈ ಪಾದಗಳೆ ಸಾಧುಗಳನ್ನು ನಿನ್ನೆಡೆ ಸೆಳೆವುವು
ಮುನ್ನ ದುಷ್ಟರ ಅಧೋಗತಿಯೆಡೆ ದೂಡೆ ಕಾರಣವಾಗಿವೆ ೧೨,೦೮೮

ನಿನ್ನ ಪಾವನ ಪಾದಗಳ ಪ್ರಾರ್ಥಿಸುವ ನಮ್ಮಯ ಕೊಳೆಗಳ
ಘನ್ನ ಪಾಪಗಳನ್ನು ಕಳೆಯುತ ಪೊರೆಯಲೆಮ್ಮನು ಸತತವು ೧೨,೦೮೯

ಪ್ರಕೃತಿ-ಪುರುಷರಿಗಿಂತ ಮಿಗಿಲಾಗಿರುವ ಕಾಲಸ್ವರೂಪನೇ
ರಕ್ಷಣೆಯ-ಸೌಖ್ಯವನು ನೀಡಲಿ ನಿನ್ನ ಪಾದಾಂಬುಜಗಳು ೧೨,೦೯೦

ನೀನೆ ಜಗದುದಯ-ಸ್ಥಿತಿ-ಲಯಗಳಿಗೆ ಕಾರಣನಾಗಿಹೆ
ಶೀತ-ಮಳೆ-ಬಿಸಿಲೆಂಬ ಮುಬ್ಬಗೆ ನಾಭಿಗಳು ಇಹ ವರ್ಷವೂ ೧೨,೦೯೧

ಕಾಲ ರೂಪನೆ ಎಲ್ಲ ಪ್ರಾಣಿಗಳನ್ನು ನಾಶಕೆ ತಳ್ಳುವೆ
ತಳೆದು ಕರುಣೆಯ ನಿನ್ನ ಚರಣಗಳೆರಡು ನಮ್ಮನು ಪೊರೆಯಲಿ ೧೨,೦೯೨

ಸ್ಥಾವರವು-ಜಂಗಮದ ಜಗಕೂ ನೀನೆ ಸ್ವಾಮಿಯು ಆಗಿರೆ
ವಿಷಯಗಳು ನಿನಗಂಟದಿರುವುವು ಇತರರಿಗೆ ತಾವಂಟುತ ೧೨,೦೯೩

ಹದಿನಾರು ಸಾವಿರಕಿಂತ ಅಧಿಕವು ಪತ್ನಿಯರು ನಿನ್ನೊಡನಿರೆ
ಮದಿಸಿ ಕಾಮನ ಬಾಣದಿಂದಲು ನಿನ್ನ ಚಂಚಲಗೊಳಿಸರು! ೧೨,೦೯೪

ವಾಸುದೇವನೆ! ಮೂರುಲೋಕದ ಪಾಪಗಳ ನೀ ತೊಳೆಯಲು
ಈಶ ನದಿಗಳನೆರಡು ವಿಧದಲಿ ಹರಿಸುತಿಹೆ ದಯೆಯಿಂದಲಿ ೧೨,೦೯೫

ನಿನ್ನ ಅಮೃತವ ತುಂಬಿ ಹರಿದಿಹ ಲೀಲೆಗಳ ಕಥೆನದಿಯಿರೆ
ನಿನ್ನ ಪಾದವ ತೊಳೆದು ಹೊರಬಂದಿರುವ ಗಂಗಾ ನದಿಯಿರೆ ೧೨,೦೯೬

ಶುಚಿಯು-ಆಚಾರಗಳ ಕೂಡಿದ ಸಾಧುಜನ ಕಿವಿಯಿಂದಲಿ
ನಿನ್ನ ಲೀಲೆಗಳನ್ನು ಕೇಳುತ, ತನುವ ಮೀಯಿಸಿ ನದಿಯಲಿ ೧೨,೦೯೭

ಎರಡೂ ತೀರ್ಥಗಳನ್ನು ಸೇವಿಸಿ ತಮ್ಮ ಪಾಪವ ಕಳೆಯುತ
ಹರಿಯೇ! ನಿನ್ನಡಿಗಳನು ಪಡೆವರು ಧನ್ಯಜೀವಿಗಳೆಲ್ಲರೂ" ೧೨,೦೯೮

ಶ್ರೀಶುಕಮಹಾಮುನಿಗಳು ಹೇಳುತ್ತಾರೆ :

ಪರೀಕ್ಷಿತನೇ! ಸುರರು, ಶಂಕರನಿಂದ ಕೂಡಿದ ಬ್ರಹ್ಮನು
ಹರಿಯನೀಪರಿ ಸ್ತೋತ್ರಮಾಡಿಯೆ ತನ್ನ ಧಾಮಕೆ ತೆರಳಲು
ಸರಿದು ನಿಲ್ಲುತ ಅಂತರಿಕ್ಷದಿ ಹೇಳಿದನು ಗೋವಿಂದಗೆ ೧೨,೦೯೯

"ಪ್ರಭುವೆ! ನಿನ್ನನು ನಾವು ಹಿಂದೆಯೆ ಭುವಿಯ ಭಾರವ ಕಡಿಯಲು
'ಈ ಭುವಿಯೊಳವತರಿಸಿರು' ಎನುತಲಿ ಕೇಳಿಕೊಂಡೆವು ಭರದಲಿ ೧೨,೧೦೦

ನೀನು ನಮ್ಮಯ ಪ್ರಾರ್ಥನೆಯ ಬಹು ಕರುಣೆಯಿಂದಲಿ ನಡೆಸಿಹೆ
ಪುನಃ ಸಜ್ಜನರನ್ನು ಪೊರೆಯುತ ಧರ್ಮರಕ್ಷಣೆಗೈದಿಹೆ! ೧೨,೧೦೧

ನೀನು ಸರ್ವೋತ್ತಮನ ರೂಪದಿ ಬಂದಿರುವೆ ಯದುವಂಶದಿ
ನಿಂದು ಜಗಹಿತಕಾಗಿ ಬಹಳ ಪರಾಕ್ರಮಂಗಳ ನಡೆಸಿಹೆ! ೧೨,೧೦೨

ಲೋಕಪಾಪಗಳನ್ನು ತೊಳೆಯುತ ಧವಳ ಕೀರ್ತಿಯ ಪಡೆದಿಹೆ
ಭಕ್ತಿಯಿಂದಲಿ ನಿನ್ನ ಲೀಲೆಗಳನ್ನು ಕೇಳುತಹೇಳಿರೆ
ಬಹಳ ಸುಲಭದಿ ಕಲಿಯುಗದಿ ಅಜ್ಞಾನ ಕತ್ತಲೆ ಕಳೆವರು ೧೨,೧೦೩

ಪುರುಷವರನೇ! ಸರ್ವಶಕ್ತನೇ! ಯಾದವರ ಕುಲದಲ್ಲಿಯೇ
ಕರುಣೆಯಲಿ ಅವತರಿಸಿ ನೂರಿಪ್ಪತ್ತುವರ್ಷಗಳಾದುವು! ೧೨,೧೦೪

ಇಲ್ಲಿಯೇ ನೀನಿರುತ ಸುರರಿಗೆ ಮಾಡುವಂತಹ ಕೆಲಸವು
ಉಳಿಯದಿರೆ, ನಮ್ಮೆಲ್ಲ ಕೆಲಸವು ಪೂರ್ಣವಾಗಿಯೆ ಫಲಿಸಿವೆ ೧೨,೧೦೫

ಬ್ರಾಹ್ಮಣರ ಶಾಪದಲಿ ನಿನ್ನಯ ಕುಲವು ನಶಿಸಲು ನಿಂದಿದೆ
ವೈಕುಂಠನಾಥನೇ! ಸರಿಯೆನಿಸೆ ಹಿಂದಿರುಗು ನಿನ್ನಯ ಧಾಮಕೆ
ನಿನ್ನ ಸೇವಕರಾದ ನಮ್ಮನು-ಲೋಕಗಳ ಪರಿಪಾಲಿಸು" ೧೨,೧೦೬

ಅ. 2. ವಿಷಯಸಂಗ್ರಹ

ಶ್ರೀಕೃಷ್ಣನೂ ಯಾದವವಂಶದ ನಾಶದ ನಂತರ ನಾನು ನಿನ್ನ ಲೋಕಕ್ಕೆ ಬರುವೆನೆಂದನು. ದ್ವಾರಕೆಯಲ್ಲೂ ಹಲವು ಅಶುಭಸೂಚಕವಾದ ಅಪಶಕುನಗಳಾಗಿ ಅಲ್ಲಿನ ವೃದ್ಧರನ್ನು ಪ್ರಭಾಸಕ್ಷೇತ್ರಕ್ಕೆ ತೆರಳುವಂತೆ ಕ್ರಮ ಕೈಗೊಂಡನು. ಯಾದವರೂ ಸಹ ಅದರಂತೆ ಪ್ರಭಾಸದಲ್ಲಿ ದೇವ, ಪಿತೃತರ್ಪಣ ಪೂಜಾದಿಗಳನ್ನು ಮಾಡಿ ಸಂಸಾರವನ್ನು ದಾಟಲು ಹೊರಟರು.

ಇದನ್ನೆಲ್ಲ ನೋಡುತ್ತಿದ್ದ ಶ್ರೀ ಉದ್ಧವನು, ಶ್ರೀಕೃಷ್ಣನಲ್ಲಿ ಏಕಾಂತದಲ್ಲಿ ಭಕ್ತಿಪೂರ್ವಕವಾಗಿ ನಮಿಸಿ, ಸ್ತುತಿಸಿ,

ತನ್ನನ್ನೂ ಜೊತೆ ಒಯ್ಯಲು ಬಿನ್ನಹ ಮಾಡಿದನು. ಆಗ ಶ್ರೀಕೃಷ್ಣನು ಉದ್ಧವನಿಗೆ ಇನ್ನು ಏಳು ದಿನಗಳಲ್ಲಿ ದ್ವಾರಕೆಯು ಕಟಲಲ್ಲಿ ಮುಳುಗಿ ಬಿಡುವುದು. ನಾನು ಹೊರಟ ನಂತರ ಭೂಮಿಯಲ್ಲಿ ಕಲಿಪುರುಷನ ಆಧಿಪತ್ಯ ಉಂಟಾಗಿ ಜನ ಅಧರ್ಮಮಾರ್ಗವನ್ನು ಅನುಸರಿಸುವರು. ನೀನು ಅವರ ಮಧ್ಯದಲ್ಲಿ ಇರಬೇಡ. ಬದರೀಕಾಶ್ರಮಕ್ಕೆ ತೆರಳಿ ನನ್ನನ್ನು ಭಕ್ತಿಯಿಂದ ಧ್ಯಾನಿಸಿ ಮೋಕ್ಷವನ್ನು ಪಡೆಯುವೆ ಎಂದು ಹೇಳಿದನು. ಅದಕ್ಕೆ ಉದ್ಧವ, ಕೃಷ್ಣ, ಜೀವನ ಅನಿತ್ಯ ಎಂದು ಅರಿತಿದ್ದೂ ಮಾಯೆಯಿಂದ ಮನಸ್ಸು ಬೇರಾಗದೆ ನಿನ್ನನ್ನು ಬಿಟ್ಟು ಹೇಗಿರುವುದೆಂದು ವಿಷಾದ ಪಡುತ್ತಿದೆ. ಈ ಮಾಯೆಯಿಂದ ಹೊರಬರುವ ಮಾರ್ಗವನ್ನು ಉಪದೇಶಿಸಬೇಕೆಂದು ಕೋರಿದನು.

ಆಗ ಶ್ರೀಕೃಷ್ಣನು, ಉದ್ಧವನನ್ನು ಕುರಿತು, ಹೇ ಉದ್ಧವ, ಮನಸ್ಸನ್ನೂ ಇಂದ್ರಿಯಗಳನ್ನೂ ವಶ ಪಡಿಸಿ, ಈ ಜಗತ್ತೆಲ್ಲ ನಾ(ಕೃಷ್ಣ)ನಾಗಿಯೂ, ನಾನೇ ಜಗತ್ತಾಗಿಯೂ ಇರುವುದನ್ನು ನೋಡುತ್ತ, ರಾಗ, ದ್ವೇಷವಿಲ್ಲದೆ, ಒಳಿತು, ಕೆಡುಕನ್ನು ಯೋಚಿಸದೆ, ತನಗೆ ವಿಧಿಸಿದ ಕರ್ಮಗಳನ್ನು ನನಗೇ ಅರ್ಪಿಸಿ ಮಾಡುತ್ತ ಜೀವಿಸುವುದರಿಂದ, ದುಃಖಗಳಿಂದ ಪಾರಾಗ-ಬಹುದು. ಉತ್ತಮವಾದ ಮನುಷ್ಯ ಜನ್ಮ ಪಡೆದವನು, ಅಹಂಕಾರ, ಮಮಕಾರ ಬಿಟ್ಟು ಬಾಳಬೇಕು. ಪರಮಾತ್ಮಜ್ಞಾನವನ್ನು ಕೋರುವ ಆತ, ಈ ಲೋಕದಲ್ಲಿನ ಸಮಸ್ತವಸ್ತುಗಳಿಂದಲೂ ಜ್ಞಾನವನ್ನು ಪಡೆಯುವನು. ಈ ವಿಷಯದಲ್ಲಿ ಯದು-ಮಹಾರಾಜನಿಗೂ, ಒಬ್ಬ ಅವಧೂತ ಸನ್ಯಾಸಿಗೂ ನಡೆದ ಸಂಭಾಷಣೆಯನ್ನು ನಿನಗೆ ಹೇಳುವೆ ಎಂದ.

ಆ. 2. ಮೂಲಶ್ಲೋಕಗಳು

श्रीभगवानुवाच

अवधारितमेतन्मे यदात्थ विबुधेश्वर । कृतं वः कार्यमखिलं भूमेर्भारोऽवतारितः ॥ २८ ॥

तदिदं यादवकुलं वीर्यशौर्यश्रियोद्धतम् । लोकं जिघृक्षद्रुद्धं मे वेलयेव महार्णवः ॥ २९ ॥

यद्यसंहृत्य दृप्तानां यदूनां विपुलं कुलम् । गन्तास्म्यनेन लोकोऽयमुद्वेलेन विनङ्क्ष्यति ॥ ३० ॥

इदानीं नाश आरब्धः कुलस्य द्विजशापतः । यास्यामि भवनं ब्रह्मन्नेतदन्ते तवानघ ॥ ३१

श्रीशुक उवाच

इत्युक्तो लोकनाथेन स्वयम्भूः प्रणिपत्य तम् । सह देवगणैर्देवः स्वधाम समपद्यत ॥ ३२ ॥

अथ तस्यां महोत्पातान्द्वारवत्यां समुत्थितान् । विलोक्य भगवानाह यदुवृद्धान्समागतान् ॥ ३३ ॥

श्रीभगवानुवाच

एते वै सुमहोत्पाता व्युत्तिष्ठन्तीह सर्वतः । शापश्च नः कुलस्यासीद्ब्राह्मणेभ्यो दुरत्ययः ॥ ३४ ॥

न वस्तव्यमिहास्माभिर्जिजीविषुभिरार्यकाः । प्रभासं सुमहत्पुण्यं यास्यामोऽद्यैव मा चिरम् ॥ ३५ ॥

यत्र स्नात्वा दक्षशापाद्गृहीतो यक्ष्मणोडुराट् । विमुक्तः किल्बिषात्सद्यो भेजे भूयः कलोदयम् ॥ ३६ ॥

वयं च तस्मिन्नाप्लुत्य तर्पयित्वा पितॄन्सुरान् । भोजयित्वोशिजो विप्रान् नानागुणवतान्धसा ॥ ३७ ॥

तेषु दानानि पात्रेषु श्रद्धयोप्त्वा महान्ति वै । वृजिनानि तरिष्यामो दानैर्नौभिरिवार्णवम् ॥ ३८ ॥

श्रीशुक उवाच

एवं भगवतादिष्टा यादवाः कुलनन्दन । गन्तुं कृतधियस्तीर्थं स्यन्दनान्समयूयुजन् ॥ ३९ ॥

तन्निरीक्ष्योद्धवो राजन् श्रुत्वा भगवतोदितम् । दृष्ट्वारिष्टानि घोराणि नित्यं कृष्णमनुव्रतः ॥ ४० ॥

विविक्त उपसङ्गम्य जगतामीश्वरेश्वरम् । प्रणम्य शिरसा पादौ प्राञ्जलिस्तमभाषत ॥ ४१ ॥

श्रीउद्धव उवाच

देवदेवेश योगेश पुण्यश्रवणकीर्तन । संहृत्यैतत्कुलं नूनं लोकं सन्त्यक्ष्यते भवान् ।
विप्रशापं समर्थोऽपि प्रत्यहन्न यदीश्वरः ॥ ४२ ॥

नाहं तवाङ्घ्रिकमलं क्षणार्धमपि केशव । त्यक्तुं समुत्सहे नाथ स्वधाम नय मामपि ॥ ४३ ॥

तव विक्रीडितं कृष्ण नृणां परममङ्गलम् । कर्णपीयूषमास्वाद्य त्यजत्यन्यस्पृहां जनः ॥ ४४ ॥

शय्यासनाटनस्थानस्नानक्रीडाशनादिषु । कथं त्वां प्रियमात्मानं वयं भक्तास्त्यजेमहि ॥ ४५ ॥
त्वयोपभुक्तस्रग्गन्धवासोऽलङ्कारचर्चिताः । उच्छिष्टभोजिनो दासास्तव मायां जयेमहि ॥ ४६ ॥
वातरशना य ऋषयः श्रमणा ऊर्ध्वमन्थिनः । ब्रह्माख्यं धाम ते यान्ति शान्ताः सन्न्यासीनोऽमलाः ॥ ४७ ॥
वयं त्विह महायोगिन्भ्रमन्तः कर्मवर्त्मसु । त्वद्वार्तया तरिष्यामस्तावकैर्दुस्तरं तमः ॥ ४८ ॥
स्मरन्तः कीर्तयन्तस्ते कृतानि गदितानि च । गत्युत्स्मितेक्षणक्ष्वेलि यन्नृलोकविडम्बनम् ॥ ४९ ॥

श्रीशुक उवाच

एवं विज्ञापितो राजन् भगवान् देवकीसुतः । एकान्तिनं प्रियं भृत्यमुद्धवं समभाषत ॥ ५० ॥

(अथ सप्तमोऽध्यायः)

श्रीभगवानुवाच

यदात्थ मां महाभाग तच्चिकीर्षितमेव मे । ब्रह्मा भवो लोकपालाः स्वर्वासं मेऽभिकाङ्क्षिणः ॥ १ ॥
मया निष्पादितं ह्यत्र देवकार्यमशेषतः । यदर्थमवतीर्णोऽहमंशेन ब्रह्मणार्थितः ॥ २ ॥
कुलं वै शापनिर्दग्धं नङ्क्ष्यत्यन्योन्यविग्रहात् । समुद्रः सप्तमेऽह्न्येनां पुरीं च प्लावयिष्यति ॥ ३ ॥
यर्ह्येवायं मया त्यक्तो लोकोऽयं नष्टमङ्गलः । भविष्यत्यचिरात्साधो कलिनापि निराकृतः ॥ ४ ॥
न वस्तव्यं त्वयैवेह मया त्यक्ते महीतले । जनोऽधर्मरुचिर्भद्र भविष्यति कलौ युगे ॥ ५ ॥
त्वं तु सर्वं परित्यज्य स्नेहं स्वजनबन्धुषु । मय्यावेश्य मनः संयक्समदृग्विचरस्व गाम् ॥ ६ ॥
यदिदं मनसा वाचा चक्षुर्भ्यां श्रवणादिभिः । नश्वरं गृह्यमाणं च विद्धि मायामनोमयम् ॥ ७ ॥
पुंसोऽयुक्तस्य नानार्थो भ्रमः स गुणदोषभाक् । कर्माकर्मविकर्मेति गुणदोषधियो भिदा ॥ ८ ॥
तस्माद्युक्तेन्द्रियग्रामो युक्तचित्त इदं जगत् । आत्मनीक्षस्व विततमात्मानं मय्यधीश्वरे ॥ ९ ॥
ज्ञानविज्ञानसंयुक्त आत्मभूतः शरीरिणाम् । अत्मानुभवतुष्टात्मा नान्तरायैर्विहन्यसे ॥ १० ॥
दोषबुद्ध्योभयातीतो निषेधान्न निवर्तते । गुणबुद्ध्या च विहितं न करोति यथार्भकः ॥ ११ ॥
सर्वभूतसुहृच्छान्तो ज्ञानविज्ञाननिश्चयः । पश्यन्मदात्मकं विश्वं न विपद्येत वै पुनः ॥ १२ ॥

श्रीशुक उवाच

इत्यादिष्टो भगवता महाभागवतो नृप । उद्धवः प्रणिपत्याह तत्त्वजिज्ञासुरच्युतम् ॥ १३ ॥

श्रीउद्धव उवाच

योगेश योगविन्यास योगात्मन् योगसम्भव । निःश्रेयसाय मे प्रोक्तस्त्यागः सन्न्यासलक्षणः ॥ १४ ॥
त्यागोऽयं दुष्करो भूमन्कामानां विषयात्मभिः । सुतरां त्वयि सर्वात्मन्नभक्तैरिति मे मतिः ॥ १५ ॥

सोऽहं ममाहमिति मूढमतिर्विगाढस्त्वन्मायया विरचितात्मनि सानुबन्धे ।
तत्त्वञ्जसा निगदितं भवता यथाहं संसाधयामि भगवन्ननुशाधि भृत्यम् ॥ १६ ॥

सत्यस्य ते स्वदृश आत्मन आत्मनोऽन्यं वक्तारमीश विबुधेष्वपि नानुचक्षे ।
सर्वे विमोहितधियस्तव माययेमे ब्रह्मादयस्तनुभृतो बहिरर्थभावाः ॥ १७ ॥

तस्माद्भवन्तमनवद्यमनन्तपारं सर्वज्ञमीश्वरमकुण्ठविकुण्ठधिष्ण्यम् ।
निर्विण्णधीरहमु हे वृजिनाभितप्तो नारायणं नरसखं शरणं प्रपद्ये ॥ १८ ॥

श्रीभगवानुवाच

प्रायेण मनुजा लोके लोकतत्त्वविचक्षणाः । समुद्धरन्ति ह्यात्मानमात्मनैवाशुभाशयात् ॥ १९ ॥

आत्मनो गुरुरात्मैव पुरुषस्य विशेषतः । यत्प्रत्यक्षानुमानाभ्यां श्रेयोऽसावनुविन्दते ॥ २० ॥
पुरुषत्वे च मां धीराः साङ्ख्ययोगविशारदाः । आविस्तरां प्रपश्यन्ति सर्वशक्त्युपबृंहितम् ॥ २१ ॥
एकद्वित्रिचतुष्पादो बहुपादस्तथापदः । बह्व्यः सन्ति पुरः सृष्टास्तासां मे पौरुषी प्रिया ॥ २२ ॥
अत्र मां मृगयन्त्यद्धा युक्ता हेतुभिरीश्वरम् । गृह्यमाणैर्गुणैर्लिङ्गैरग्राह्यमनुमानतः ॥ २३ ॥
अत्राप्युदाहरन्तीममितिहासं पुरातनम् । अवधूतस्य संवादं यदोरमिततेजसः ॥ २४ ॥

ಇ. 2. ಐಯ್ಯಂಗಾರರ ಕನ್ನಡೀಕರಣ

ಭಗವಂತನು ಹೇಳುತ್ತಾನೆ :

"ದೇವವರನೇ! ನಿಮ್ಮ ಕೆಲಸಗಳೆಲ್ಲ ಮುಗಿಸಿಹೆ ನಿಜದಲಿ
ಭುವಿಯ ಭಾರವ ಇಳಿಸಿದರೂ ಇನ್ನೊಂದು ಕೆಲಸವು ಉಳಿದಿದೆ! ೧೨,೧೦೭

ನಮ್ಮ ಯದುವಂಶಜರು ಬಲ-ವಿಕ್ರಮದಿ ಸಿರಿ-ಧನದಿಂದಲೂ
ನಿಂದು ಉನ್ಮತ್ತರೂ ಲೋಕವ ನುಂಗುವಂತಹ ದುರುಳರೂ ೧೨,೧೦೮

ಕಡಲದಡವದು ಕಡಲ ತಡೆಹಿಡಿವಂತೆ ಅವರನ್ನು ತಡೆದಿದೆ
ಬಿಡಿದು ನಾಶವ ಮಾಡದಿರೆ ಮದಿಸಿರುವ ಯಾದವರೆಲ್ಲರ ೧೨,೧೦೯

ಹಿಡಿದು ಲೋಕಗಳೆಲ್ಲವನು ಮರ್ಯ್ಯಾದೆ ಮೀರಿಯೆ ತುಳಿವರು
ಬ್ರಹ್ಮದೇವನೆ! ಬ್ರಾಹ್ಮಣರ ಶಾಪದಲೆ ನಶಿಸಲು ತೊಡಗಿರೆ
ವಂಶನಾಶದ ಕಾರ್ಯಮುಗಿಸುತ ನನ್ನ ಧಾಮಕೆ ತೆರಳುವೆ" ೧೨,೧೧೦

ದ್ವಾರಕೆಯಲ್ಲಿ ಅಪಶಕುನಗಳು

ಶ್ರೀಶುಕಮುನಿಗಳು ಹೇಳುತ್ತಾರೆ :

ಎಲ್ಲ ಲೋಕಗಳಧಿಪತಿಯು ಶ್ರೀಕೃಷ್ಣ ನುಡಿದಿರಲೀಪರಿ
ಕೇಳಿ ಬ್ರಹ್ಮನು ಮರಳಿ ನಮಿಸುತ ತನ್ನ ಧಾಮವ ಸೇರಿದ ೧೨,೧೧೧

ಸುರರು-ಬ್ರಹ್ಮನು ಹೊರಟು ಹೋಗಿರೆ ಆಗ ದ್ವಾರಕೆನಗರದಿ
ಹಿರಿಯ ಉತ್ಪಾತಗಳು ಅಪಶಕುನಗಳು ಕಾಣಿಸಿಕೊಂಡವು ೧೨,೧೧೨

ಯಾದವರ ಕೆಲ ಹಿರಿಯರಿದನು ನೋಡಿ ಭಯ-ಆತಂಕದಿ
ಬಂದು ಕೃಷ್ಣನ ಬಳಿಗೆ ತಮ್ಮಯ ಭಯವ ತಿಳಿಸುತ ನಿಂದಿರೆ ೧೨,೧೧೩

ಸಮಾಧಾನವಗೊಳಿಸಿ ಅವರನ್ನು ಕೃಷ್ಣನೀಪರಿ ನುಡಿದಿರೆ
"ನಿಮ್ಮ ಆತಂಕಗಳು ಸಹಜವೆ! ಕಾಣಲಪಶಕುನಂಗಳು ೧೨,೧೧೪

ಹಿರಿಯ ಉತ್ಪಾತಗಳು ಕಂಡಿವೆ, ನಿಮಗೆ ತಿಳಿದಿದೆಯಾಗಲೇ
ಭರಿಸಲಾಗದ ವಿಪ್ರ ಶಾಪವು ನಮ್ಮ ವಂಶದ ಕವಿದಿದೆ! ೧೨,೧೧೫

ನಮ್ಮ ಪ್ರಾಣಗಳನ್ನು ರಕ್ಷಿಸಿಕೊಂಬ ಬಯಕೆಯು ನಮಗಿರೆ
ಇಲ್ಲಿನಿಂದ ಹೊರಟು ಹೋಗುವುದುಚಿತವಾಗಿದೆ ಕೂಡಲೇ ೧೩,೧೧೬

ತೊರೆದು ದ್ವಾರಕೆಯನ್ನು ನಾವು ಪವಿತ್ರವಾಗಿಹ ಕ್ಷೇತ್ರಕೆ
ಹೊರಟುಹೋಗುವ 'ಪ್ರಭಾಸ'ಕೆ ನಾವಿಂದೇ ಈಗಲೇ, ತಡೆಯದೆ
ವಿಪ್ರಶಾಪದಲಿಂದ ಬಿಡುಗಡೆ ಹೊಂದುವೆವು ಆ ಕ್ಷೇತ್ರದಿ ೧೨,೧೧೭

ದಕ್ಷನೀಡಿದ ಶಾಪದಿಂದಲಿ ಚಂದ್ರನಿಗೆ 'ಕ್ಷಯ' ಬಂದಿರೆ
ಮುಕ್ತನಾದನು ಮಿಂದು ಇದುವೆ ಪವಿತ್ರ ಕ್ಷೇತ್ರದಲಾತನು ೧೨,೧೧೮

ಕಳೆದುಕೊಳ್ಳುತ ರೋಗವನು ತಾ ಹಿಂದಿನಂತೆಯೆ ಆದನು
ಕಲೆಗಳೆಲ್ಲವ ಮತ್ತೆ ಪಡೆಯುತ ಬೆಳಗಿನಿಂದನು ಚಂದ್ರನು ೧೨,೧೧೯

ನಾವು ಅದುವೆ ಪ್ರಭಾಸಕ್ಷೇತ್ರದಿ ತೀರ್ಥಸ್ನಾನವ ಮಾಡುತ
ದೇವ-ಪಿತೃಗಳಿಗಿತ್ತು ತರ್ಪಣ ದಾನ-ಧರ್ಮವ ಮಾಡುವ ೧೨,೧೨೦

ಜಹಜನೇರುತ ಸಾಗರವನು ದಾಟುವಂದದಿ ನಾವ್ಗಳೂ
ಬ್ರಾಹ್ಮಣರಿಗೆ ಭೂರಿಭೋಜನ-ದಾನ ದಕ್ಷಿಣೆ ನೀಡುತ
ಮಹಾಸಂಕಟದಿಂದ ಪಾರಾಗುವೆವು ಸುಲಭದಿ ನಿಜದಲಿ" ೧೨,೧೨೧

ಶ್ರೀಶುಕಮುನಿಗಳು ಹೇಳುತ್ತಾರೆ :

ಅರಸ! ಕೃಷ್ಣನು ಇಂತು ಆಜ್ಞೆಯ ಮಾಡಿದೊಡನೆಯೆ ಎಲ್ಲರೂ
ಶಿರಸಾವಹಿಸಿಯೆ ಒಮ್ಮತದಲಿ ಪ್ರಭಾಸಕ್ಷೇತ್ರಕ್ಕೆ ಹೊರಟರು ೧೨,೧೨೨

ಅರಸ! ಉದ್ಧವ ಕೃಷಭಕ್ತನು ಸೇವಕನು ತಾನಾಗಿರೆ
ಹರಿಯ ಸತತವು ಆಶ್ರಯಿಸುತಲಿ ಅವನ ಸೇವೆಯೆಗೈವನು ೧೨,೧೨೩

ಯಾದವರು ಶ್ರೀಕೃಷ್ಣ ನುಡಿದಿರೆ ಪ್ರಯಾಣಕೆ ಅಣಿಮಾಡಿರೆ
ಅದುವೆ ಸಮಯದಿ ದ್ವಾರಕೆಯಲಿ ಅರಿಷ್ಟಗಳು ಕಾಣಿಸುತಿರೆ ೧೨,೧೨೪

ಕೃಷ್ಣನನು ನಮಿಸುತಲಿ ಉದ್ಧವ ಕರವ ಮುಗಿಯುತ ನುಡಿದನು
"ದೀನ ರಕ್ಷಕ! ದೇವ ದೇವನೆ! ಸರ್ವಶಕ್ತನೆ! ಶ್ರೀಹರಿ! ೧೨,೧೨೫

ವಿಪ್ರಶಾಪವ ವಿಫಲಗೊಳಿಸೆ ಸಮರ್ಥನಾದರು ಕೃಷ್ಣನೇ!
ತಪ್ಪದೆಯೆ ನೀ ಯಾದವರ ಕುಲ ಸಂಹರಿಸಿ ಭುವಿಯನು ತೊರೆಯುವೆ! ೧೨,೧೨೬

ನಿನ್ನ ಚರಣಂಗಳನು ನಾ ಕ್ಷಣಮಾತ್ರವಾದರು ಅಗಲೆನು!
ನನ್ನನೂ ನಿನ್ನೊಡನೆ ಕರೆದುಕೋ ನಿನ್ನ ಧಾಮದೊಳಿರುವೆನು ೧೨,೧೨೭

ನಾವು ಕುಳಿತಿರೆ, ನಿಂತಿರಲು, ಮಲಗಿರಲು, ಎಚ್ಚರದಿಂದಿರೆ
ನಿನ್ನ ಜೊತೆಯಲೆ ಕಾಲಕಳೆವೆವು, ಸ್ನಾನ-ಭೋಜನ-ಆಟದಿ ೧೨,೧೨೮

ನಿನ್ನ ಜೊತೆಯಿರದಿರಲು ಕೆಲಸಗಳಾವುದನು ನಾವ್ ಮಾಡೆವು
ನಿನ್ನ ಧಾಮಕೆ ನನ್ನನೂ ಕರೆದೊಯ್ಯ್ದು ಕರಣಿಸು ದೇವನೇ ! ೧೨,೧೨೯

ನೀನು ಧರಿಸಿದ ಮಾಲೆಯನ್ನು ಪ್ರಸಾದರೂಪದಿ ಮುಡಿಯುತ
ನನ್ನ ಗಂಧವ ಪೂಸಿಕೊಳ್ಳುವೆ, ಶೇಷವಸ್ತ್ರವನುಡುವೆನು ೧೨,೧೩೦

ನಿನ್ನ ಸೇವೆಯೊಳಿಂದ ನಾವು ಮಾಯೆಯನೆ ಗೆದ್ದಿರುವೆವು
ನಿನ್ನ ಅಗಲಿಕೆಗಾಗಿ ಬಹಳವೆ ಭಯವಪಡುತಿಹೆ ದೇವನೇ! ೧೨,೧೩೧

ಹಿರಿಯ ಮುನಿಗಳು ದಿಗಂಬರರಾಗಿರುತ ಜೀವನಪೂರ್ತಿಯೂ
ಹಿರಿದು ನೈಷ್ಠಿಕ ಬ್ರಹ್ಮಚರ್ಯವ ಪಾಲಿಸುತ ಸಾಧಿಸುತಿರೆ ೧೨,೧೩೨

ಅವರ ಹೃದಯವದಾಗಿ ನಿರ್ಮಲ ಶಾಂತವಾಗೆ ವಿರಕ್ತರು
ದೇವ! ನಿನ್ನಯ 'ಬ್ರಹ್ಮನಾಮಕ' ಪರಮಪದವನೆ ಪಡೆವರು ೧೨,೧೩೩

ಕರ್ಮಮಾರ್ಗದಿ ಬಿದ್ದು ತೊಳಲುವ ನಾವು ನಿನ್ನಯ ಭಕ್ತರೋಲ್
ನಾಮ ಸಂಕೀರ್ತನೆಯ ಮಾಡುತ ಲೀಲೆಗಳ ಹಾಡುತ್ತಲಿ
ತಮೋ ರೂಪದ ಸಾಗರವ ಸಂಸಾರದಾಟಿಯೆ ಬಿಡುವೆವು ೧೨,೧೩೪

ನಿನ್ನ ಸುಂದರ ನಡಿಗೆ, ಅಮೃತಪ್ರಾಯ ನುಡಿ, ಕುಡಿನೋಟವ
ಮನುಜಲೋಕದ ನಟನೆಗಳನೂ ಸ್ಮರಿಸಿ ನಿನ್ನೊಳೆ ಮುಳುಗುತ ೧೨,೧೩೫

ಮನವ ನಿನ್ನೊಳೆ ಲೀನಗೊಳಿಸುತ ದಾಟುವೆವು ಸಂಸಾರವ
ನಿನ್ನ ಮಾಯೆಗೆ ಭಯವೆ ಪಡೆವು! ಅಗಲಿಕೆಯನೂ ಸಹಿಸೆವು! ೧೨,೧೩೬

ಶ್ರೀಶುಕಮುನಿಗಳು ಹೇಳುತ್ತಾರೆ :

ಅರಸ! ಉದ್ಧವನಿಂತು ಪೇಳಿರೆ ದೇವಕೀಸುತ ಕೃಷ್ಣನು
ಸರಿದು ಏಕಾಂತದಲಿ ಪ್ರಿಯಸೇವಕಗೆ ಉದ್ಧವಗೆಂದನು ೧೨,೧೩೭

ಅಧ್ಯಾಯ - ೭ - ಅವಧೂತ ಉಪಾಖ್ಯಾನ

ಭಗವಂತನಾದ ಶ್ರೀಕೃಷ್ಣನು ಹೇಳುತ್ತಾನೆ :

ಉದ್ಧವನೆ! ನೀ ನನಗೆ ಹೇಳಿದುದನೆಲ್ಲವನು
ಸದ್ಯದಲೆ ಮಾಡೆ ನಾ ಮನವ ಮಾಡಿಹೆನು
ಬ್ರಹ್ಮ ಶಂಕರ, ಇಂದ್ರ ಮೊದಲಾದ ಸುರರೆಲ್ಲ
ಭೂಲೋಕ ತ್ಯಜಿಸೆ ಮಾಡಿಹರು ನೆನಪೆನಗೆ ೧೨,೧೩೮

ನಾನು ಮುಗಿಸಿಹೆನೆಲ್ಲ ಕಾರ್ಯಗಳ ಸುರರಿಂಗೆ
ಅಂಶಜನು ಬಲಭದ್ರನೊಡನೆ ನಾ ಬಂದು
ನಮ್ಮ ಕುಲವೀಗಲೇ ಸುಟ್ಟಿಹುದು ಶಾಪದಿಂ
ತಮ್ಮ ತಮ್ಮಲ್ಲೆ ಹೊಡೆದಾಡಿ ನಶಿಸುವರವರು! ೧೨,೧೩೯

ಇಂದಿನಿಂದೇಳು ದಿನಗಳಿಗೆ ತಾ ಸರಿಯಾಗಿ
ಬಂದು ದ್ವಾರಕೆಯನ್ನು ಸಾಗರವು ಮುಳುಗಿಪುದು
ಈ ಲೋಕವನು ನಾನು ತೊರೆದುಬಿಟ್ಟೊಡನೆಯೇ
ಕಲಿಯಿಂದ ಕವಿದು ಮಂಗಳಹೀನವಾಗುವುದು ೧೨,೧೪೦

ನಾನು ಜಗವನು ತೊರೆದು ಹೊರಟುಹೋಗಿರಲಾಗಿ
ನೀನು ಇಲ್ಲಿರಬೇಡ! ಧರ್ಮವದು ನಶಿಸಿರಲು
ಜನರು ಬಹು ದುಷ್ಟರಾಗಿರುತ ಸತ್ಯವ ಜರಿಯೆ
ನೀನಿಂಥ ಜನರೊಡನೆ ಇರುವುದುಚಿತವು ಇರದು ೧೨,೧೪೧

ನೀನಾದರೋ ಮನೆಯ-ಧನವ ತೊರೆಯುತಲಿ
ಬಂಧುಗಳ, ಸತಿ-ಸುತರ ಸ್ನೇಹವನೆ ಮರೆತಿರುವೆ
ನಿನ್ನ ಮನವನು ಎನ್ನೊಳಿರಿಸಿ ಪರಿಪೂರ್ಣದಲಿ
ಸಂಚರಿಸು ಭುವಿಯಲ್ಲಿ ಸಮಮನದಿ ನೋಡುತಲಿ ೧೨,೧೪೨

ಮನದ ಯೋಚನೆಯದುವು, ಹೇಳುವಂತಹ ನುಡಿಯು
ಕಿವಿಗೆ ಕೇಳುವ ಮಾತು, ಕಣ್ಣ ನೋಟಗಳೂ
ಎಲ್ಲವೂ ನಿಜದಂತೆ ಕಾಣುವುವು ಮಾಯೆಯಿಂ
ಬಲ್ಲ ವಿಬುಧನು ಮಾತ್ರ ತಿಳಿಯುವನು ಸತ್ಯವನು ೧೨,೧೪೩

ಇವುಗಳೆಲ್ಲವು ನಾಶವಾಗುವುದೆ ನಿಜವಿರಲು
ಇವು ಸ್ವಪ್ನದಂತೆಯೆ ಮನದ ಆಟಗಳಿರಲು
ತಿಳಿ! ಎಲ್ಲವನು ಮಾಯೆ-ನಶ್ವರಗಳೆಂದೆನುತ
ಎಲ್ಲವೂ ಸಮಾಹಿತದ ಚಿತ್ತವಿರದ ಭ್ರಮೆಯು ೧೨,೧೪೪

ಗುಣವು-ದೋಷಗಳನ್ನು ಕಾಣ್ಬ ಬುದ್ಧಿಯ ನರಗೆ
ಕಾಣುವುವು ಕರ್ಮವೂ, ಅಕರ್ಮ, ವಿಕರ್ಮಗಳೂ
ಆತ್ಮವನು ಬಿಟ್ಟಿತರ ವಿಷಯಗಳ ತೊರೆಯುತಲಿ
ಆತ್ಮಾವಲೋಕನವ ಮಾಡುತಲಿ ನೀ ನೆಲೆಸು ೧೨,೧೪೫

ಶಾಸ್ತ್ರಜ್ಞಾನದಲಿಂದ ಆತ್ಮಾನುಭವದಿಂದ
ಆತ್ಮಸಂತುಷ್ಟಿಯನ್ನು ಪಡೆದಿರಲು ತಾ ನರನು
ಆತ್ಮಭೂತನೆ ಆಗಿ ಇರುತ ಪ್ರಾಣಿಗಳಲ್ಲಿ
ಸತತ ವಿಘ್ನಗಳಿಂದ ಬಾಧೆಗಳ ಪಡದಿರುವೆ
ಮತ್ತೆ ಸಿಲುಕದೆ ಇರುವೆ ಸಂಸಾರ ಬಂಧನಕೆ?" ೧೨,೧೪೬

ಶ್ರೀಶುಕಮುನಿಗಳು ಹೇಳುತ್ತಾರೆ :

ಇಂತು ಶ್ರೀಕೃಷ್ಣನವಗಾದೇಶವಿತ್ತಿರಲು
ತತ್ತ್ವಜ್ಞಾನವ ಪೂರ್ಣ ತಿಳಿವ ಮನದಲಿ ನಿಂದು
ಮತ್ತೆ ನಮಿಸುತ ಕೃಷ್ಣನಿಂಗೆ ಅತಿ ವಿನಯದಲಿ
ಪ್ರಾರ್ಥಿಸಿದನುದ್ಧವನು ನುಡಿಯುತಲಿ ಈ ಪರಿಯು ೧೨,೧೪೭

"ಯೋಗೇಶ! ಯೋಗಾತ್ಮ! ಯೋಗದಿಂ ಬಂದವನೇ!
ಸಾಗಿ ನೀ ಸಂನ್ಯಾಸ-ತ್ಯಾಗಗಳ ತಿಳಿಸಿರುವೆ
ಸತತ ವಿಷಯದ ಸುಖಗಳಲಿ ಮನವು ಇರುವವಗೆ
ಅತಿ ಕಷ್ಟ ತಾನಾಗೆ ಕಾಮ-ಭೋಗವ ತೊರೆಯೆ ೧೨,೧೪೮

ನಿನ್ನ ಮಾಯೆಯೊಳಿಂದ ಬಂದ ನನ್ನಯ ತನುವ,
ಬಂಧುಗಳ 'ನಾನು-ನನ್ನದು' ಎಂದು ತಿಳಿಯುತಲಿ
ಸಂಸಾರಸಾಗರದಿ ಮುಳುಗಿಬಿಟ್ಟಿದೆ ನಾನು
ಬ್ರಹ್ಮತತ್ತ್ವವನೆಂತು ಸುಖದಿಂದ ಸಾಧಿಸಲಿ? ೧೨,೧೪೯

ಎಲ್ಲವನ್ನು ತಿಳಿದಿರುವ ದೋಷವಿರದವನಾದ
ಒಲವಿರುವ ನಾರಾಯಣನೆ ನಿನಗೆ ಶರಣಾದೆ
ನೀನೆ ದಯೆಯಿಂದ ಮಹದಧ್ಯಾತ್ಮತತ್ತ್ವವನು
ಎನಗಿಂದು ತಿಳಿಸಿಕೊಡು ನಿನ್ನರಿವ ನೀ ನೀಡು" ೧೨,೧೫೦

ಶ್ರೀ ಭಗವಂತನು ಹೇಳುತ್ತಾನೆ :

ಈ ಭುವಿಯೊಳುದ್ಧವನೆ! ಲೋಕವು ಅನಿತ್ಯವೆನೆ
ವಿಬುಧರರಿಯುತ ತಮ್ಮ ತಾವೇ ಉದ್ಧರಿಸಿಕೊಳೆ
ನರನಿಗಾತ್ಮನೆ ಅವನ ಅತಿಹಿತದ ಗುರುವಾಗೆ
ಅರಿತು, ಅನುಭವದಿಂದ ತನ್ನ ಹಿತ ತಾ ಪಡೆವ ೧೨,೧೫೧

ವಿವಿಧ ಕಾಲುಗಳಿರುವ ಪ್ರಾಣಿಗಳ ನಾಗೈದೆ
ಅವರೊಳು ದ್ವಿಪಾದಿ ನರರಂತು ನನಗತಿಪ್ರಿಯರು

ಪುರುಷರಲಿ ಸಾಂಖ್ಯಯೋಗವನರಿತ ಧೀರರು
ಸರ್ವಶಕ್ತನ ಎನ್ನ ಅರಿತುಕೊಳುವರು ನಿಜದಿ ೧೨,೧೫೨

ಅ. 3. ವಿಷಯಸಂಗ್ರಹ

ಯದುಮಹಾರಾಜನು ಅವಧೂತ ಸನ್ಯಾಸಿಯನ್ನು, ಬ್ರಹ್ಮಜ್ಞಾನಿಗಳೇ, ನೀವು ಎಲ್ಲವನ್ನೂ ಅರಿಯುವ ಜ್ಞಾನ, ಶಕ್ತಿಗಳುಳ್ಳವರು, ಯಾವುದನ್ನೂ ಬಯಸದೆ ಬಾಲನಂತೆ ಸಂಚರಿಸುವುರಿ. ಧರ್ಮ, ಅರ್ಥ, ಕಾಮ ಮುಂತಾದ ಪುರುಷಾರ್ಥಗಳಲ್ಲಿ ವಿರಕ್ತರಾಗಿರುವಿರಿ. ಅಚೇತನದಂತೆ, ಹುಚ್ಚನಂತೆ, ಪಿಶಾಚನಂತೆ ಏನನ್ನೂ ಮಾಡದೆ, ಬಯಸದೆ ಇರುವಿರಿ. ಜನರು ಕಾಮಾದಿಗಳಿಂದ ದಹಿಸುತ್ತಿರಲು, ಮುಕ್ತನಂತೆ ಗಂಗಾಜಲದಲ್ಲಿ (ಮುಳುಗಿ)ರುವ ಆನೆಯಂತೆ ತಪಿಸದಿರುವಿರಿ. ಈ ಪರಿಪೂರ್ಣ ತೃಪ್ತಿ, ಆನಂದಗಳಿಗೆ ಕಾರಣವನ್ನು ತಿಳಿಸಿ ಎಂದು ಕೇಳಿದನು. ಅದಕ್ಕೆ ಅವಧೂತ ಸನ್ಯಾಸಿ ಹೀಗೆಂದರು –

ನನಗೆ ಹಲವು ಗುರುಗಳಿದ್ದಾರೆ. ಅವರಿಂದ ನಾನು ತಿಳಿದ ಜ್ಞಾನದಿಂದಲೇ ಹೀಗೆ ಸುಖವಾಗಿ ನಿಶ್ಚಿಂತನಾಗಿರುವೆನು ಎಂದರು. ಇವರನ್ನು ನಾವು ದೈನಂದಿನ ಜೀವನದಲ್ಲಿ ನೋಡುತ್ತೇವೆ. ಆ ನನ್ನ ಗುರುಗಳು ಯಾರು ಗೊತ್ತೇ? ಅವರು - ಭೂಮಿ, ವಾಯು, ಆಕಾಶ, ನೀರು, ಅಗ್ನಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ಪತಂಗ, ದುಂಬಿ, ಆನೆ, ಜೇನು ತೆಗೆಯುವವ, ಜಿಂಕೆ, ಮೀನು, ಪಿಂಗಳೆಯೆಂಬ ದಾಸಿ, ಕುರರವೆಂಬ (ಅಳುದನಿಯ) ಪಕ್ಷಿ, ಮಗು, ಕುಮಾರಿ, ಬಾಣವನ್ನು ಮಾಡುವವ, ರೇಶ್ಮೆಹುಳು, ಹಾವು, ಜೇಡ ಎಂಬ ಇಪ್ಪತ್ತುನಾಲ್ಕು ವ್ಯಕ್ತಿಗಳೇ. ಇವರಿಂದ ನಾನು ಕಲಿತ ಜ್ಞಾನವನ್ನೂ ತಿಳಿಸುತ್ತೇನೆಂದು ವಿವರಿಸಿದರು.

1. **ಭೂಮಿಯಿಂದ** - ಎಲ್ಲ ಪ್ರಾಣಿಗಳೂ ತುಳಿದು, ಅಗೆತು, ತೋಡಿ ಹಿಂಸಿಸಿದರೂ ಅವನ್ನೆಲ್ಲ ಸಹಿಸಿಕೊಳ್ಳುವಂತೆ ಬೇರೆಯವರಿಂದ ಹಿಂಸೆ ಉಂಟಾದರೂ ಅವರು ದೈವದಿಂದ ಪ್ರೇರಿಸಲ್ಪಟ್ಟು ಹಿಂಸಿಸುವರೇ ಹೊರತು ತಾವಾಗಿಯೇ ಅಲ್ಲ ಎಂದೆಣಿಸಿ ನಮ್ಮ ಧರ್ಮದಿಂದ ತಪ್ಪಕೂಡದೆಂದರಿತೆ. ಮತ್ತೆಯೂ, ಬೆಟ್ಟ, ಬಳ್ಳಿ, ಝರಿ ಮುಂತಾದವು ಪರರಿಗೇ ಉಪಯೋಗವಾಗುವಂತೆ, ಮರಗಳು ಹಣ್ಣು, ಎಲೆ, ನೆರಳು, ಕೊಂಬೆ, ಕಟ್ಟಿಗೆ ಮುಂತಾದವಿಂದ ಪರರಿಗೇ ಉಪಯೋಗ-ವಾಗುವುವೋ, ಹಾಗೆಯೇ ಅನೇಕ ಬಗೆಗಳಲ್ಲೂ ಪರರಿಗೆ ಉಪಕಾರ ಮಾಡಬೇಕೆಂದು ತಿಳಿದಿಕೊಳ್ಳಬೇಕು.

2. **ಗಾಳಿಯಿಂದ** - ಪ್ರಾಣವಾಯುವು ಶರೀರವನ್ನು ಬಿಟ್ಟು ಹೊರಹೋಗದಿರಲು ಕೇವಲ ಆಹಾರವನ್ನು ಮಾತ್ರ ಅಪೇಕ್ಷಿಸುವುದೇ ಹೊರತು ಇಂದ್ರಿಯವಿಷಯಗಳಾದ ರೂಪ ಮುಂತಾದ್ದನ್ನಲ್ಲ. ಅದರಂತೆ ಮುನಿಯಾದವನು ದೇಹ ಧರಿಸಲು ಬೇಕಾದ ಆಹಾರವನ್ನಷ್ಟೇ ತಿಂದು ಸಂತೋಷಿಸಬೇಕೇ ಹೊರತು ರೂಪ, ರಸ ಮುಂತಾದ್ದನ್ನು ಆಸೇ ಪಡ-ಬಾರದು. (ಸುಂದರಿಯರಾದ ಸ್ತ್ರೀಯರನ್ನು ನೋಡುವುದು, ಮಧುರವಾದ ಗಾನವನ್ನು ಕೇಳುವುದು ಮುಂತಾದವು ಕೂಡದೆಂದೂ, ಪ್ರಾಣಧಾರಣ ಮಾಡದಿದ್ದಲ್ಲಿ ಮನಸ್ಸೂ ಹೋಗಿ ಜ್ಞಾನ ನಶಿಸುವುದೆಂದು ಭಾವ). ಹಾಗೇ ವಿಷಯ-ಗಳಲ್ಲಿ ಆಸೆಪಟ್ಟಲ್ಲಿ ವಾಕ್ಕು, ಮನಸ್ಸು ಇವೆಲ್ಲವೂ ವಿಕ್ಷಿಪ್ತವಾಗುವುವು. ಮತ್ತೂ, ಗಾಳಿಯು ಕಾಡಲ್ಲೂ, ಕಾಡು-ಗಿಚ್ಚಲ್ಲೂ ಸಂಬಂಧಿಸದಂತೆ ಯೋಗಿಯು ಗುಣವುಳ್ಳ ವಸ್ತುಗಳೊಡನೆ ಸಂಬಂಧಿಸಿದರೂ ಅವುಗಳ ಧರ್ಮದೊಡನೆ ಸಂಬಂಧಿಸಕೂಡದು. ಮತ್ತೂ, ಗಾಳಿಯು ಗಂಧ ಮುಂತಾದವೊಡನೆ ಸಂಬಂಧಿಸಿದಂತೆ ಕೆಡರೂ, ವಾಸ್ತವದಲ್ಲಿ ಹೇಗೆ ಆ ಗುಣಗಳೊಡನೆ ಸಂಬಂಧಿಸುವುದಿಲ್ಲವೋ, ಹಾಗೆ ಆತ್ಮನ ಸ್ವರೂಪವನ್ನರಿತ ಯೋಗಿಯು ಆತ್ಮ ಶರೀರದಲ್ಲಿ ಪ್ರವೇಶಿಸಿ, ಬಾಲ್ಯ, ಯೌವನ ಮೊದಲಾದ ದಶೆಗಳನ್ನು ಪಡೆದಂತೆ ಕಂಡರೂ ವಾಸ್ತವದಲ್ಲಿ ಆತ್ಮನಿಗೆ ಅದರ ಸಂಬಂಧವಿಲ್ಲವೆಂದ-ರಿಯಬೇಕು.

3. **ಆಕಾಶದಿಂದ** - ಎಲ್ಲೂ ವ್ಯಾಪಿಸಿದ್ದರೂ ಯಾವುದರೊಡನೆಯೂ ಸಂಬಂಧಿಸದೆ, ಅಳೆಯಲಾರದಿರುವುದೋ, ಹಾಗೆ ಬ್ರಹ್ಮವು ಸ್ವರೂಪದಿಂದ ಎಲ್ಲೂ ವ್ಯಾಪಿಸಿರುವುದರಿಂದ ಸ್ಥಾವರ, ಜಂಗಮ, ಪ್ರಾಣಿಗಳಲ್ಲಿ ಅಡಗಿದ್ದರೂ, ಯಾವುದರಲ್ಲೂ ಸೇರದ್ದೆಂದೂ, ಅಪ್ರಮೇಯವೆಂದೂ ತಿಳಿಯ ಬೇಕು. ಹಾಗೆಯೇ ವಾಯುವಿನಿಂದ ಪ್ರೇರಿಸಲ್ಪಟ್ಟ ಮೋಡ ಮುಂತಾದ್ದೊಡನೆ ಆಕಾಶ ಹೇಗೆ ಸಂಬಂಧಿಸುವುದಿಲ್ಲವೋ ಹಾಗೆ ಭೂಮಿ, ನೀರು, ತೇಜಸ್ಸು ಮೊದಲಾದವಿಂದ ಕಾಲದಿಂದ ಸೃಷ್ಟಿಯಾಗುವ ಶರೀರದೊಡನೆ ಆತ್ಮವು ಸಂಬಂಧಿಸದು.

4. **ನೀರಿನಿಂದ** - ಸ್ವಾಭಾವಿಕವಾಗಿ, ಅಶಕ್ತನೂ, ಜನರಲ್ಲಿ ಪ್ರೀತಿಯುಳ್ಳವನೂ, ಇಂಪಾಗಿ ಮಾತನಾಡುವ ಯೋಗಿಯು ನೀರಿನಂತೆ ನೋಡುವುದು, ಮುಟ್ಟುವುದು, ಹೇಳುವುದು ಮುಂತಾದ್ದರಿಂದ ಸ್ನೇಹಿತರನ್ನು ಶುದ್ಧೀಕರಿಸುವನು.

5. ಅಗ್ನಿಯಿಂದ - ಜ್ಞಾನ(ತೇಜಸ್ಸಿನಿಂ)ದಿಂದಲೂ ತಪಸ್ಸಿನಿಂದಲೂ ಜ್ವಲಿಸುವ, ಬೇರೆಯವರಿಂದ ಅಪಮಾನಿಸಲಾಗದ, ಹೊಟ್ಟೆಯನ್ನು ಪಾತ್ರೆಯಾಗಿ ಉಳ್ಳ (ಅಂದರೆ ಕೂಡಿಟ್ಟು ಕೊಳ್ಳದ) ಯೋಗಿಯು, ಅಗ್ನಿ ಎಲ್ಲವನ್ನೂ ದಹಿಸಿದರೂ ಅಗ್ನಿಗೆ ದೋಷವೇರ್ಪಡದಂತೆ ಎಲ್ಲವನ್ನೂ (ರುಚಿಕರವೋ ಅಲ್ಲವೋ) ತಿಂದರೂ ಪಾಪವನ್ನು ಹೊಂದನು. ಮತ್ತೂ, ಮುನಿಯು ಅಗ್ನಿಯಂತೆ ಕೆಲ ಸಮಯ ಹೊರಗೆ ಕಂಡೂ, ಕೆಲ ಸಮಯ ಕಾಣದೆಯೂ ಸಂಚರಿಸುವನು. ಕ್ಷೇಮವನ್ನು ಬಯಸುವವನು ಅವನನ್ನು ಉಪಾಸಿಸಿ, ಆಹಾರ ಕೊಟ್ಟು, ಯೋಗಿ ಉಂಡಾಗ, ತಮ್ಮ ಹಳೆಯ, ಹೊಸ ಪಾಪಗಳನ್ನು ಕಳೆದು ಕೊಳ್ಳುವರು. ಮತ್ತೆಯೂ ಅಗ್ನಿಯು ಉದ್ದವಾದ ಕಟ್ಟಿಗೆಯಲ್ಲಿ ಉರಿದಾಗ ಉದ್ದವಾಗಿಯೂ, ಸೊಟ್ಟೆಯಾದ್ದರಲ್ಲಿ ಆಯಾ ಆಕಾರದಲ್ಲಿಯೂ ಕಾಣಿಸಿದರೂ, ಅದು ಇರುವುದು ಒಂದೇ ರೀತಿ. ಹಾಗೆಯೇ ಭಗವಂತನು ಬ್ರಾಹ್ಮಣ, ಶೂದ್ರ ಮುಂತಾದ ಜಗತ್ತನ್ನು ತನ್ನ ಮಾಯೆಯಿಂದ ಸೃಷ್ಟಿಸಿ ಅದರಲ್ಲಿ ಪ್ರವೇಶಿಸಿ ಚೇಷ್ಟಿಸುವನು. (ಮೇಲು-ಕೀಳೆಂಬುದು ಆತ್ಮನಲ್ಲಿ ಸ್ವಾಭಾವಿಕವಾಗಿಲ್ಲ. ಅದು ಒಂದೆ ರೀತಿಯದ್ದಾದರೂ ದೇವಶರೀರ ಪಡೆದಾಗ ಮೇಲೆಂದೂ, ಪಶುಶರೀರ ಪಡೆದರೆ ಕೀಳೆಂದೂ ಹೇಳಿಸಿಕೊಳ್ಳುವನು. ಆದ್ದರಿಂದ ಭೇದವು ಶರೀರವೆಂಬ ಉಪಾಧಿಯಿಂದ ಉಂಟಾಗಿದ್ದು, ಸ್ವಾಭಾವಿಕವಲ್ಲ).

6. ಚಂದ್ರನಿಂದ - ಚಂದ್ರಕಲೆಗಳು ಸ್ವಲ್ಪ ಕಾಲ ವೃದ್ಧಿಯನ್ನೂ, ಸ್ವಲ್ಪ ಕಾಲ ಕ್ಷಯವನ್ನೂ ಹೊಂದಿದರೂ, ಚಂದ್ರಮಂಡಲದಲ್ಲಿ ಹೆಚ್ಚು ಕಡಿಮೆ ಇಲ್ಲದಂತೆ ಜನ್ಮ ಮರಣಾದಿ ವಿಕಾರಗಳು ಶರೀರಕ್ಕೇ ಹೊರತು ಆತ್ಮನಿಗಲ್ಲ. ಆತ್ಮನು ಹುಟ್ಟುವುದೋ ಬೆಳೆಯುವುದೋ ವಿಕಾರ ಹೊಂದುವುದೋ ನಾಶವಾಗುವುದೋ ಇಲ್ಲ. ಕಾಲವೇಗದಿಂದ ಆತ್ಮನಿಗೆ ಸಂಬಂಧಿಸಿದ ಶರೀರಗಳಿಗೆ ಜನನ, ಮರಣಗಳು ಏರ್ಪಡುವುವು. ದೇಹ ಮುಂತಾದವು ಸ್ಥಿರವಲ್ಲದ್ದರಿಂದ ಅವಲ್ಲಿ ಆಸೆ ಇಡದೆ ವೈರಾಗ್ಯವನ್ನು ಹೊಂದಬೇಕು.

7. ಸೂರ್ಯನಿಂದ - ಕಿರಣಗಳಿಂದ ನೀರನ್ನು ಗ್ರಹಿಸಿ (ಮಳೆ)ಕಾಲದಲ್ಲಿ ಸುರಿಸುವಂತೆ ಯೋಗಿಯು ಇಂದ್ರಿಯಗಳಿಂದ ವಿಷಯಗಳನ್ನು ಗ್ರಹಿಸಿ ಬೇಕಾದವರಿಗೆ ಸಕಾಲದಲ್ಲಿ ಕೊಡುವನು. ತನಗೆಂದು ಏನನ್ನೂ ಕೂಡಿಡನು. ಆದರೂ ನಾನು ದುಡಿದೆ, ಮಾಡಿದೆ ಎಂದೆಲ್ಲ ಭಾವಿಸುವುದಿಲ್ಲ. ಮತ್ತೂ, ನೀರಿನಲ್ಲಿ ಪ್ರತಿಬಿಂಬಿಸುವ ಸೂರ್ಯಮಂಡಲದಂತೆ ಪರಮಾತ್ಮನು ಉಪಾಧಿಗಳಲ್ಲಿ (ಶರೀರಗಳಲ್ಲಿ) ಪ್ರತಿಬಿಂಬಿಸುವನು (ಅದರಿಂದ ಮಂದಮತಿಗಳು ಪರಮಾತ್ಮ ಬೇರೆಬೇರೆ ಎಂದೆಣಿಸುವರು).

8. ಪಾರಿವಾಳದಿಂದ - ಯಾರಲ್ಲಿಯೂ ಅತಿಪ್ರೀತಿಯನ್ನೋ ಹೆಚ್ಚು ಸಂಗವನ್ನೋ ಇಟ್ಟುಕೊಳ್ಳ ಬಾರದು. ಹಾಗಿಲ್ಲದಿದ್ದರೆ, ಪಾರಿವಾಳದಂತೆ ದೈನ್ಯವನ್ನೂ, ತಾಪವನ್ನೂ ಪಡೆಯುವನು. ಒಂದು ಕಾಡಿನಲ್ಲಿ ಒಂದು ಪಾರಿವಾಳ ದಂಪತಿ ಮರದಲ್ಲಿ ಗೂಡು ಕಟ್ಟಿಕೊಂಡು ಸಂತೋಷವಾಗಿದ್ದವು. ಅವು ಕಣ್ಣು, ಮೈ, ಮತ್ತು ಬುದ್ಧಿಗಳು ಚೆನ್ನಾಗಿ ಹೆಣೆದು ಅತಿಪ್ರೀತಿಯಿಂದಿದ್ದವು. ಮಲಗುವುದು, ಕುಳಿತಿರುವುದು, ಸಂಚಾರ, ವಾಸ, ಮಾತು, ವಿಹಾರ, ಆಹಾರ ಮುಂತಾದ ಎಲ್ಲ ದಶೆಗಳಲ್ಲೂ ಒಟ್ಟಿಗೇ ಇರುತ್ತಿದ್ದವು. ಹೆಣ್ಣು ಪಾರಿವಾಳ ಬಯಸಿದ್ದನ್ನೆಲ್ಲ ಗಂಡು ಪಾರಿವಾಳವು ಪೂರೈಸುತ್ತಿತ್ತು. ಕ್ರಮೇಣ ಅವಕ್ಕೆ ಮರಿಗಳು ಹುಟ್ಟಿದವು. ಅವುಗಳ ರೂಪ, ಗುಣ ಮುಂತಾದರ ಮೇಲೆ ಅತೀತವಾದ ಆಸೆಯನ್ನಿಟ್ಟು ಸಾಕುತ್ತಿದ್ದವು. ಒಮ್ಮೆ ಆ ಜೋಡಿ ಹೊರಗೆ ಹೋಗಿದ್ದಾಗ ಒಬ್ಬ ಬೇಡನು ಆ ಮರಿಗಳನ್ನು ಬಲೆಯನ್ನು ಹಾಸಿ ಕಸಿದುಕೊಂಡನು. ತಾಯಿ ಪಾರಿವಾಳ ಬಂದ ಕೂಡಲೇ ಮರಿಗಳು ಬಲೆಯಲ್ಲಿ ಸಿಕ್ಕಿರುವುದನ್ನು ಕಂಡು ದುಃಖದಿಂದ ತಾನೂ ಬಲೆಯನ್ನು ಹೊಕ್ಕಿತು. ಸ್ವಲ್ಪ ಸಮಯದಲ್ಲಿ ಅಲ್ಲಿಗೆ ಬಂದ ಗಂಡು ಪಾರಿವಾಳವು, ತನ್ನ ಹೆಂಡತಿ ಮತ್ತು ಮರಿಗಳು ಸೆರೆಯಾಗಿರುವುದನ್ನು ನೋಡಿ ಬಹಳ ದುಃಖ ಪಡುತ್ತ ತಾನೂ ಬಲೆಯನ್ನು ಪ್ರವೇಶಿಸಿತು. ಬೇಡನು, ತಂದೆ, ತಾಯಿ, ಮರಿಗಳೊಡನೆ ಸಂತೋಷವಾಗಿ ಮನೆಗೆ ತೆರಳಿದ. ಈ ರೀತಿಯಾದ ಗತಿಯೇ ಎಲ್ಲ ಜೀವರಿಗೂ ಹೆಂಡತಿ, ಮಕ್ಕಳು ಮೇಲಿಡುವ ಅತಿಯಾದ ಆಸೆಯಿಂದ ತಾನೇ ಸಂಸಾರ ಬಂಧನಕ್ಕೆ ಒಳಗಾಗಿಸುತ್ತದೆ. ಇವರು ಆರೂಢಚ್ಯುತರು (ಮೇಲೆ ಹತ್ತಿ ಬಿದ್ದವರು). ಆಸೆಯೇ ದುಃಖಕ್ಕೆ ಕಾರಣ.

9. ಹೆಬ್ಬಾವಿನಿಂದ - ತಾನಿದ್ದ ಸ್ಥಳದಲ್ಲೇ ಆಹಾರ ದೊರೆತಾಗ ತಿಂದು, ಏನೂ ಸಿಗದಾಗ ಉಪವಾಸವಿದ್ದು ಬಾಳುವುದನ್ನು ತಿಳಿಯಬೇಕು. ಜ್ಞಾನಿಯೂ ತಾನಾಗಿ ಸಿಕ್ಕ ಆಹಾರದಿಂದ ಶರೀರ ಧಾರಣೆ ಮಾಡಬೇಕು. ಅದಕ್ಕಾಗಿ ಅಲೆದು ತಿರುಗ ಬಾರದು.

10. ಸಮುದ್ರದಿಂದ - ಎಷ್ಟು ನದಿಗಳ ನೀರು ಸದಾ ಬಂದು ಸೇರುತ್ತಿದ್ದರೂ, ಮಳೆ ಬೀಳುತ್ತಿದ್ದರೂ, ಸಾಗರ ತನ್ನ ಎಲ್ಲೆ (ಸೀಮೆ)ಯನ್ನೂ ಮೀರದಂತೆ, ಮತ್ತು ನದಿ, ಮಳೆನೀರು ಬಾರದಾಗ ಬತ್ತಿ ಹೋಗದಿರುವಂತೆ, ಯಾವಾಗಲೂ ಒಂದೇ ಮಟ್ಟದಲ್ಲಿ ಪರಿಪೂರ್ಣವಾಗಿರುವ ಹಾಗೆ ಬಾಳಿನಲ್ಲಿ ಎಷ್ಟೇ ಸುಖ, ದುಃಖಗಳ ಅನುಭವಗಳು ಬಂದಾಗಲೂ ಮನಸ್ಸು

ಯಾವಾಗಲೂ ಶಾಂತವಾಗಿರ ಬೇಕೆಂದರಿಯ ಬಹುದು. ಬೇರೆಯವರು ಅಳೆಯಲಾಗದಿ(ಅಳವಾಗಿ)ರುವುದು ಕೂಡ ಯುಕ್ತ.

ಇತ್ಯಾದಿಯಾಗಿ ಮುಂದುವರೆದಿದೆ.

ಅ. 3. ಮೂಲಶ್ಲೋಕಗಳು

अवधूतं द्विजं कश्चिच्चरन्तमकुतोभयम् । कविं निरीक्ष्य तरुणं यदुः पप्रच्छ धर्मवित् ॥ २५ ॥

श्रीयदुरुवाच

कुतो बुद्धिरियं ब्रह्मन्नकर्तुः सुविशारदा । यामासाद्य भवाँल्लोकं विद्वांश्चरति बालवत् ॥ २६ ॥

प्रायो धर्मार्थकामेषु विवित्सायां च मानवाः । हेतुनैव समीहन्ते आयुषो यशसः श्रियः ॥ २७ ॥

त्वं तु कल्पः कविर्दक्षः सुभगोऽमृतभाषणः । न कर्ता नेहसे किञ्चिज्जडोन्मत्तपिशाचवत् ॥ २८ ॥

जनेषु दह्यमानेषु कामलोभदवाग्निना । न तप्यसेऽग्निना मुक्तो गङ्गाम्भःस्थ इव द्विपः ॥ २९ ॥

त्वं हि नः पृच्छतां ब्रह्मन्नात्मन्यानन्दकारणम् । ब्रूहि स्पर्शविहीनस्य भवतः केवलात्मनः ॥ ३० ॥

श्रीभगवानुवाच

यदुनैवं महाभागो ब्रह्मण्येन सुमेधसा । पृष्टः सभाजितः प्राह प्रश्रयावनतं द्विजः ॥ ३१ ॥

श्रीब्राह्मण उवाच

सन्ति मे गुरवो राजन्बहवो बुद्ध्युपश्रिताः । यतो बुद्धिमुपादाय मुक्तोऽटामीह तान्छृणु ॥ ३२ ॥

पृथिवी वायुराकाशमापोऽग्निश्चन्द्रमा रविः । कपोतोऽजगरः सिन्धुः पतङ्गो मधुकृद्गजः ॥ ३३ ॥

मधुहा हरिणो मीनः पिङ्गला कुररोऽर्भकः । कुमारी शरकृत्सर्प ऊर्णनाभिः सुपेशकृत् ॥ ३४ ॥

एते मे गुरवो राजंश्चतुर्विंशतिराश्रिताः । शिक्षा वृत्तिभिरेतेषामन्वशिक्षमिहात्मनः ॥ ३५ ॥

यतो यदनुशिक्षामि यथा वा नाहुषात्मज । तत्तथा पुरुषव्याघ्र निबोध कथयामि ते ॥ ३६ ॥

भूतैराक्रम्यमाणोऽपि धीरो दैववशानुगैः । तद्विद्वान् न चलेन्मार्गादन्वशिक्षं क्षितेर्व्रतम् ॥ ३७ ॥

शश्वत्परार्थसर्वेहः परार्थैकान्तसम्भवः । साधुः शिक्षेत भूभृत्तो नगशिष्यः परात्मताम् ॥ ३८ ॥

प्राणवृत्त्यैव सन्तुष्येन्मुनिर्नैवेन्द्रियप्रियैः । ज्ञानं यथा न नश्येत नावकीर्येत वाङ्मनः ॥ ३९ ॥

विषयेष्वाविशन्योगी नानाधर्मेषु सर्वतः । गुणदोषव्यपेतात्मा न विषज्जेत वायुवत् ॥ ४० ॥

पार्थिवेष्विह देहेषु प्रविष्टस्तद्गुणाश्रयः । गुणैर्न युज्यते योगी गन्धैर्वायुरिवात्मदृक् ॥ ४१ ॥

अन्तर्हितश्च स्थिरजङ्गमेषु ब्रह्मात्मभावेन समन्वयेन ।
व्याप्त्याव्यवच्छेदमसङ्गमात्मनो मुनिर्नभस्त्वं विततस्य भावयेत् ॥ ४२ ॥

तेजोऽबन्नमयैर्भावैर्मेघाद्यैर्वायुनेरितैः । न स्पृश्यते नभस्तद्वत्कालसृष्टैर्गुणैः पुमान् ॥ ४३ ॥

स्वच्छः प्रकृतितः स्निग्धो माधुर्यस्तीर्थभूर्नृणाम् । मुनिः पुनात्यपां मित्रमीक्षोपस्पर्शकीर्तनैः ॥ ४४ ॥

तेजस्वी तपसा दीप्तो दुर्धर्षोदरभाजनः । सर्वभक्ष्योऽपि युक्तात्मा नादत्ते मलमग्निवत् ॥ ४५ ॥

क्वचिच्छन्नः क्वचित्स्पष्ट उपास्यः श्रेय इच्छताम् । भुङ्क्ते सर्वत्र दातॄणां दहन्प्रागुत्तराशुभम् ॥ ४६ ॥

स्वमायया सृष्टमिदं सदसल्लक्षणं विभुः । प्रविष्ट ईयते तत्तत्स्वरूपोऽग्निरिवैधसि ॥ ४७ ॥

विसर्गाद्याः श्मशानान्ता भावा देहस्य नात्मनः । कलानामिव चन्द्रस्य कालेनाव्यक्तवर्त्मना ॥ ४८ ॥

कालेन ह्योघवेगेन भूतानां प्रभवाप्ययौ । नित्यावपि न दृश्येते आत्मनोऽग्नेर्यथार्चिषाम् ॥ ४९ ॥

गुणैर्गुणानुपादत्ते यथाकालं विमुञ्चति । न तेषु युज्यते योगी गोभिर्गा इव गोपतिः ॥ ५० ॥

बुध्यते स्वेन भेदेन व्यक्तिस्थ इव तद्गतः । लक्ष्यते स्थूलमतिभिरात्मा चावस्थितोऽर्कवत् ॥ ५१ ॥
नातिस्नेहः प्रसङ्गो वा कर्तव्यः क्वापि केनचित् । कुर्वन्विन्देत सन्तापं कपोत इव दीनधीः ॥ ५२ ॥
कपोतः कश्चनारण्ये कृतनीडो वनस्पतौ । कपोत्या भार्यया सार्धमुवास कतिचित्समाः ॥ ५३ ॥
कपोतौ स्नेहगुणितहृदयौ गृहधर्मिणौ । दृष्टिं दृष्ट्याङ्गमङ्गेन बुद्धिं बुद्ध्या बबन्धतुः ॥ ५४ ॥
शय्यासनाटनस्थानवार्ताक्रीडाशनादिकम् । मिथुनीभूय विस्रब्धौ चेरतुर्वनराजिषु ॥ ५५ ॥
यं यं वाञ्छति सा राजंस्तर्पयन्त्यनुकम्पिता । तं तं समनयत्कामं कृच्छ्रेणाप्यजितेन्द्रियः ॥ ५६ ॥
कपोती प्रथमं गर्भं गृह्णती काल आगते । अण्डानि सुषुवे नीडे स्वपत्युः सन्निधौ सती ॥ ५७ ॥
तेषु काले व्यजायन्त रचितावयवा हरेः । शक्तिभिर्दुर्विभाव्याभिः कोमलाङ्गतनूरुहाः ॥ ५८ ॥
प्रजाः पुपुषतुः प्रीतौ दम्पती पुत्रवत्सलौ । शृण्वन्तौ कूजितं तासां निर्वृतौ कलभाषितैः ॥ ५९ ॥
तासां पतत्रैः सुस्पर्शैः कूजितैर्मुग्धचेष्टितैः । प्रत्युद्गमैरदीनानां पितरौ मुदमापतुः ॥ ६० ॥
स्नेहानुबद्धहृदयावन्योन्यं विष्णुमायया । विमोहितौ दीनधियौ शिशून्पुपुषतुः प्रजाः ॥ ६१ ॥
एकदा जग्मतुस्तासामन्नार्थं तौ कुटुम्बिनौ । परितः कानने तस्मिन्नर्थिनौ चेरतुश्चिरम् ॥ ६२ ॥
दृष्ट्वा ताँल्लुब्धकः कश्चिद्यदृच्छातो वनेचरः । जगृहे जालमातत्य चरतः स्वालयान्तिके ॥ ६३ ॥
कपोतश्च कपोती च प्रजापोषे सदोत्सुकौ । गतौ पोषणमादाय स्वनीडमुपजग्मतुः ॥ ६४ ॥
कपोती स्वात्मजान्वीक्ष्य बालकाञ्जालसंवृतान् । तानभ्यधावत्क्रोशन्ती क्रोशतो भृशदुःखिता ॥ ६५ ॥
सासकृत्स्नेहगुणिता दीनचित्ताजमायया । स्वयं चाबध्यत शिचा बद्धान्पश्यन्त्यपस्मृतिः ॥ ६६ ॥
कपोतः स्वात्मजान्बद्धानात्मनोऽप्यधिकान्प्रियान् । भार्यां चात्मसमां दीनो विललापातिदुःखितः ॥ ६७ ॥
अहो मे पश्यतापायमल्पपुण्यस्य दुर्मतेः । अतृप्तस्याकृतार्थस्य गृहस्त्रैवर्गिको हतः ॥ ६८ ॥
अनुरूपानुकूला च यस्य मे पतिदेवता । शून्ये गृहे मां सन्त्यज्य पुत्रैः स्वर्याति साधुभिः ॥ ६९ ॥
सोऽहं शून्ये गृहे दीनो मृतदारो मृतप्रजः । जिजीविषे किमर्थं वा विधुरो दुःखजीवितः ॥ ७० ॥
तांस्तथैवावृताञ्छिग्भिर्मृत्युग्रस्तान्विचेष्टतः । स्वयं च कृपणः शिक्षु पश्यन्नप्यबुधोऽपतत् ॥ ७१ ॥
तं लब्ध्वा लुब्धकः क्रूरः कपोतं गृहमेधिनम् । कपोतकान्कपोतीं च सिद्धार्थः प्रययौ गृहम् ॥ ७२ ॥
एवं कुटुम्ब्यशान्तात्मा द्वन्द्वारामः पतत्रिवत् । पुष्णन्कुटुम्बं कृपणः सानुबन्धोऽवसीदति ॥ ७३ ॥
यः प्राप्य मानुषं लोकं मुक्तिद्वारमपावृतम् । गृहेषु खगवत्सक्तस्तमारूढच्युतं विदुः ॥ ७४ ॥

इति श्रीमद्भागवते महापुराणे पारमहंस्यां संहितायामेकादशस्कन्धे सप्तमोऽध्यायः ॥

೩. 3 ಐಯ್ಯಂಗಾರರ ಕನ್ನಡೀಕರಣ - ಇಪ್ಪತ್ನಾಲ್ಕು ಗುರುಗಳ ಕಥೆ

ಉದ್ಧವನೆ! ಆತ್ಮವನು ಹುಡುಕುವಲಿ ಮುಳುಗಿರುವ
ಯದುವಿಗೂ ಅವಧೂತ ದತ್ತಾತ್ರೇಯರಿಗು
ಸಂವಾದವ ಉದಾಹರಿಸುವರು ಅರಿತವರು
ಬ್ರಾಹ್ಮಣನ ಅವಧೂತನನು ಯದುವು ಪ್ರಶ್ನಿಸಿರೆ ೧೨,೧೫೩

"ವಿಪ್ರವರ! ನೀನಾವ ಕರ್ಮವನ್ನೂ ಮಾಡದಿಹೆ
ನಿಪುಣತೆಯು ಜ್ಞಾನವೂ ಎಂತು ಬಂದವು ನಿನಗೆ?
ಶ್ರೇಷ್ಠಬುದ್ಧಿಯ ಧರಿಸಿ ವಿದ್ವಾಂಸವರನಾಗಿ
ವಿಶ್ವದಲಿ ಅಲೆಯುತಿಹೆ ಏಕೆ ಬಾಲಕನಂತೆ? ೧೨,೧೫೪

ನರರು ಆಯುವ, ಯಶವ, ಸಿರಿಯ-ಸಂಪದ ಪಡೆಯೆ
ಧರ್ಮಾರ್ಥಕಾಮದಲು ತತ್ತ್ವ ಶೋಧಿಸುತಿರಲು
ನೀನು ಕರ್ಮವ ಮಾಡೆ ಬಹುಸಮರ್ಥನು ಇರಲು
ಜ್ಞಾನಿ, ನಿಪುಣನು, ಮಾತನುಡಿವೆ ಅಮೃತದೊಲು ೧೨,೧೫೫

ಆದರೂ ಜಡ-ಹುಚ್ಚನೊಲು, ಪಿಶಾಚದೊಲು
ನಿಂದು ಕೆಲಸವೆ ಮಾಡದಿರುವೆ ಅಲೆಯುತಲಿರುವೆ
ಕಾಮ-ಲೋಭದ ತಾಪಕೆಂದೂ ಸಿಲುಕದೆ ಇರುವೆ
ಹೆಂಡತಿಯು-ಮನೆಮಠಗಳಿರದೆ ನೀನಾಗಿರುವೆ ೧೨,೧೫೬

ಏಕಾಂತವಾಗಿರುತ ಆತನಲೆ ನೆಲೆಸಿರುವೆ
ಎಂತು ಸತತವು ನೀನು ಸಂತಸದಿ ಮುಳುಗಿರುವೆ?
ಆತ್ಮನಿಷ್ಠನೆ ನಿನ್ನ ಸಂತಸಕ್ಕೆ ಕಾರಣವ
ನಮಗು ತಿಳಿಸುವ ಕೃಪೆಯ ಮಾಡಿ ಆಶೀರ್ವದಿಸು" ೧೨,೧೫೭

ಭಗವಂತನಾದ ಶ್ರೀಕೃಷ್ಣನು ಹೇಳುತ್ತಿದ್ದಾನೆ :

ಉದ್ಧವನೆ! ನಮ್ಮ ಪೂರ್ವಜನ ಅರಸನ ಯದುವ
ಬುದ್ಧಿಯದು ಶುದ್ಧವಿರೆ ವಿಪ್ರಭಕ್ತಿಯು ಮೆರೆಯೆ
ಸತ್ಕರಿಸಿ ವಿಧಿಯಂತೆ ದತ್ತಾತ್ರೇಯರನು
ನಿಂತಿರಲು ವಿನಯದಲಿ ಅವಧೂತ ನುಡಿದಿರಲು ೧೨,೧೫೮

"ಅರಸನೇ! ನನ್ನ ಬುದ್ಧಿಯೊಳಿಂದ ಹಲವಾರು
ಗುರುಜನರ ಆಶ್ರಯಿಸಿ ಪಡೆದಿರುವ ಶಿಕ್ಷಣವ
ಮುಕ್ತನಾಗಿಯೆ ಜಗವ ಸ್ವೇಚ್ಛೆಯಲಿ ತಿರುಗಿರುವೆ
ಶಿಕ್ಷಣವ ಪಡೆದುದನು, ಗುರುವಿವರ ಪೇಳುವೆನು ೧೨,೧೫೯

ನೀರು, ಭುವಿಯಾಕಾಶ, ವಾಯು, ಚಂದ್ರಾಗ್ನಿಗಳು
ಪಾರಿವಾಳವು, ಸೂರ್ಯ, ಸಾಗರವು, ಹೆಬ್ಬಾವು
ದುಂಬಿ, ಆನೆಯು, ಪತಂಗವು, ಜೇನು ಬಿಡಿಸುವನು
ಜಿಂಕೆ, ಪಿಂಗಳೆ ವೇಶ್ಯೆ, ಕುರರ ಪಕ್ಷಿಯು, ಮೀನು ೧೨,೧೬೦

ಕುಮಾರಿ, ಮಗು, ತಾನು ಬಾಣವನು ಮಾಡುವವ
ರೇಷ್ಮೆಹುಳು, ಜೇಡ, ಸರ್ಪಗಳೆ ಇಪ್ಪತ್ನಾಲ್ಕು
ಗುರುಗಳಲಿ ಆಶ್ರಯಿಸಿ ಪಡೆದೆ ಶಿಕ್ಷಣ ನಾನು
ಅರಿತು ಅವರಾಚರಣೆ ಬುದ್ಧಿಯನು ಬೆಳೆಸಿಹೆನು ೧೨,೧೬೧

ಪುರುಷವರ ಯದುವೆ! ನಾ ಯಾರಿಂದಲೆಂತಾಗಿ
ಅರಿತೆ ವಿದ್ಯೆಯನೆಂಬುದನ್ನು ವಿವರಿಸುವೆನೀಗ -
ತನ್ನ ಮೇಲೆಯೆ ಬಹಳ ಸಾಧು-ದುಷ್ಟರು ನಡೆಯೆ
ನಿಂತಿಹಳು ಕ್ಷಮೆ-ಭೂಮಿ 'ದೈವಕಟ್ಟಳೆಯೆಂದು' ೧೨,೧೬೨

ಅದುವೆ ದೈವದ ನಿಯಮಕೊಳಗಾಗಿ ಪ್ರಾಣಿಗಳು
ಬಂದು ಆಕ್ರಮಿಸಿರಲು ಸತ್ಯದಿಂ ಚಲಿಸದಿರೆ
ಭೂದೇವಿಯಿಂದ ಕಲಿತಿರುವೆ ಪಾಠವ ನಾನು
ನಿಂದು 'ಕ್ಷಮೆ-ಅಚಲಮನ' ದಿಂದ ನಡೆದಿಹೆನು ೧೨,೧೬೩

ನರರ ಜೀವನವೆಲ್ಲ ಇತರರಿಗೆ ಉಪಕರಿಸೆ
ಇರುವುದೆಂಬುದ ಸಾಧು ಕಲಿಯೆ ಭುವಿ-ಗಿರಿಯಿಂದ
ಪರರಿಗುಪಕರಿಸೆ ಗಿರಿ ಮಳೆ-ಗಾಳಿಗಳ ತಡೆದು
ನೀರು-ನದಿರೂಪದಲಿ ಪ್ರಾಣಿ-ಮರಗಳ ಪೊರೆಯೆ ೧೨,೧೬೪

ಪ್ರಾಣವಾಯುವು ತನ್ನ ಉಳಿವಿಕೆಗೆ ಮಾತ್ರವೇ
ಪಡೆದು ಆಹಾರವನು ಸಂತುಷ್ಟವಾಗಿಹುದು
ಅಂತೆ ಸಾಧಕ ತನ್ನ ಜ್ಞಾನ-ಮನ ಚಲಿಸದೊಲು
ಮಾತು ನಿಲ್ಲದೆಯಿರಲು ಸೇವಿಸುವನಾಹಾರ ೧೨,೧೬೫

ಯೋಗಿ ದೇಹವ ಸೇರಿ ಗುಣಗಳನು ಆಶ್ರಯಿಸೆ
ಹೇಗೂ ಗುಣಗಳಿಗವನು ಅಂಟದೆಯೆ ಇರುವವನು
ಗಂಧ ಭುವಿಗುಣವಿಹುದು ವಾಯುವಿನದಾಗಿರದು
ಆದರೂ ಗಂಧವನು ಮೂಸುವೆವು ಗಾಳಿಯಿಂ ೧೨,೧೬೬

ಗಾಳಿ ಗಂಧವ ಹೊತ್ತು ತಂದರದು ಬೆರೆಯದಿರೆ
ಯೋಗಿಯೂ ದೇಹಗುಣಗಳಿಗೆ ಅಂಟದೆ ಇರುವ
ಕಾಮೋಪಭೋಗಗಳನನುಭವಿಸದೆಯೆ ಇರುತ
ಗಾಳಿಯೋಲು ಅಂಟದಲೆ ಲೌಕಿಕದಿ ನಡೆಯುವನು ೧೨,೧೬೭

ಆಗಸವು ವಿಸ್ತರಿಸಿ ಎಲ್ಲೆಡೆಯು ವ್ಯಾಪಿಸಿರೆ
ಅಖಂಡವಾಗಿರುತ ಅಂಟದೆಯೆ ತಾನಿಹುದು
ಮನನ ಶೀಲನು ಮುನಿಯು ಅಂತೆಯೇ ಭಾವಿಸುತ
ಪರಬ್ರಹ್ಮಭಾವದಲಿ ನಿಸ್ಸಂಗನಾಗಿರುವ ೧೨,೧೬೮

ಆಕಾಶಕೂ ಮಳೆಗು ಸಂಬಂಧವಿರದಿರಲು
'ಆಕಾಶದಿಂದಲೇ ಮಳೆಯು' ಎನೆ ಭ್ರಮಿಸುವೆವು
ಆತ್ಮ-ದೇಹಗಳಿಂಗೆ ಸಂಬಂಧವೇ ಇರದೆ
ಈ ತನುವ ವಿವಿಧ ಹೆಸರುಗಳಿಂದ ಕರೆಯುವೆವು
'ಆತ್ಮ-ದೇಹವು ಬೇರೆ' ಎಂದಾಗಸವು ತಿಳಿಸೆ! ೧೨,೧೬೯

ನೀರು ಸಹಜದಿ ಶುದ್ಧ ಪಾವನವು, ಮಧುರವು
ಇರಲು ಸತ್ಪುರುಷರೆಂದಿಗು ಶುದ್ಧ, ಪಾವನರು
ದರ್ಶನದಿ, ಸ್ಪರ್ಶದಲಿ, ಹೆಸರ ಹೇಳಿರಲವರು
ತೀರ್ಥಗಳ ತೆರದಿ ನರರನ್ನು ಶುಚಿಗೊಳಿಸುವರು
ಇಂತು ತೀರ್ಥದ ತೆರದಿ ನರರಲು ಅರಿತೆನು ೧೨,೧೭೦

ಅಗ್ನಿಯದು ತೇಜಸ್ವಿ ಜ್ಯೋತಿ ರೂಪನು ಇರಲು
ಅದನನೆಂದಿಗು ಯಾರು ಎದುರಿಸರು, ಮುಟ್ಟರು
ಉದರವೇ ಅವನ ಸಂಗ್ರಹ ಪಾತ್ರೆಯಾಗಿರುತ
ಸರ್ವಭಕ್ಷಕನಾಗಿ ದೋಷವನೆ ತಾ ಪಡೆಯ! ೧೨,೧೭೧

ಬ್ರಹವಿದನಗ್ನಿಯಂತೆಯೆ ತೇಜ ತುಂಬಿರುತ
ಸಂಗ್ರಹಿಸಿ ಮನವಿರದೆ ತಪಸಿನಲೆ ನೆಲೆಸಿರುವ
ಅಗ್ನಿ ಬೂದಿಯ ಮುಚ್ಚಿ ಪ್ರಕಟದಲು ತಾನಿರುವ
ಅಶುಭಗಳನೆಲ್ಲ ಬೇಗದಲಿ ತಾನು ದಹಿಸುವನು ೧೨,೧೭೨

ಅಂತೆ ಸಾಧಕ ಗೂಢನಾಗಿರುತಲೊಮ್ಮೊಮ್ಮೆ
ಬಂದು ಬಹಿರಂಗದಲಿ ಭಕ್ತರನ್ನು ಪೊರೆಯುತಿರೆ
ಭುಂಜಿಸುತ ನೀಡಿರುವ ನೀರು-ಫಲಗಳನವನು
ಹಿಂದು-ಮುಂದಿನ ಪಾಪಗಳ ತಾನು ಕಳೆಯುವನು ೧೨,೧೭೩

ಅಗ್ನಿಯ ಸ್ವರೂಪವನು ಮನದಲ್ಲಿ ರೂಪಿಸಿರೆ
ಭಗವಂತನೂ ಅಂತೆ ಇರುವನೆಂದರಿತಿರುತ
ಸಮಿತ್ತಿನಲು ದಿಮ್ಮಿಯಲು ಅಗ್ನಿ ತಾನಿರುತಿರಲು
ಸಹಜ ರೂಪಗಳದುವು ಯಾವುದೂ ಅಲ್ಲದೊಲು ೧೨,೧೭೪

ಭಗವಂತನೀಪರಿಯೆ ಧರಿಸಿರೆ ಚರಾಚರವ
ಭರಿಸಿರುವ ದೇಹಗಳು ನಿಜರೂಪದಲ್ಲದೊಲು
ತೇಜಸ್ಸು ಅಗ್ನಿಗದು ಸ್ವಸ್ವರೂಪವೆ ಇರಲು
ನಿಜದಿ ಪರಮಾತ್ಮನಿಗೆ 'ಪರಬ್ರಹ್ಮ ರೂಪ' ವಿರೆ ೧೨,೧೭೫

ಶುಕ್ಲಪಕ್ಷದಿ **ಚಂದ್ರಕಲೆಯು** ತಾ ಬೆಳೆಯುತಿರೆ
ಕಲೆಯು ತಾ ಕರಗುತಿರೆ ಕೃಷ್ಣಪಕ್ಷದಲಿ
ಕಾಲನ ಪ್ರಭಾವವೇ ತಾನಿರಲು ನಿಜವಾಗಿ
ಕಲೆಯ ಕ್ಷಯ-ವೃದ್ಧಿಗಳು ಇರದಿರಲು ಚಂದ್ರನಿಗೆ ೧೨,೧೭೬

ಅಂತೆಯೇ 'ಇರುವಿಕೆಯು, ಜನಿಸುವುದು, ಬೆಳೆಯುವುದು
ಪರಿಣಾಮ ಹೊಂದುವುದು, ಕರಗುವುದು, ನಶಿಸುವುದು-
ತನುವಿಗಿರಲಾರುವಿಧ ಭಾವದ ವಿಕಾರಗಳು
ತಾನಿರದು ಆತ್ಮನಿಗೆ' ಎನುತ ಜ್ಞಾನಿಯು ತಿಳಿವ
ಎನುತ ಸಾಧಕನರಿವ ಅನುಸರಿಸಿ ಚಂದ್ರನನು ೧೨,೧೭೭

ಅಗ್ನಿಯಿಂದಲಿ ಪಾಠವಿನ್ನೊಂದ ಕಲಿವುದಿದೆ
ವಿನಾಶ-ಹುಟ್ಟುವಿಕೆ ಜ್ವಾಲೆಗಿರೆ ಅವಗಲ್ಲ
ಒಂದು ಕಟ್ಟಿಗೆ ಭೂದಿಯಾಗೆ ಮತ್ತೊಂದರಲಿ
ಅಗ್ನಿ ಇದ್ದೇ ಇಹುದು ನಾಶವೆಂಬುದೇ ಇರದು! ೧೨,೧೭೮

ಅಂತೆ ತನು ಜನಿಸಿ-ನಾಶವನೆ ಪಡೆಯುವುದು
ಆತ್ಮಗಲ್ಲವು ಸ್ಥಿತಿಗಳೆಲ್ಲ ದೇಹಕೆ ಮಾತ್ರ!
ಇಂತು ಅಗ್ನಿಯಲಿಂದ ಅಧ್ಯಾತ್ಮತತ್ತ್ವವನು
ಆತ್ಮವಿದ ಪಡೆಯುವನು ಶಾಶ್ವತದಿ ನೆಲೆಸುವನು ೧೨,೧೭೯

ಸೂರ್ಯದೇವನು ಕಿರಣಗಳಲಿ ಜಲ ತಾ ಹೀರಿ
ಹೊರ ಹಾಕುವನು ನರರಿಗುಪಕಾರ ಮಾಡುತಲಿ
ನೀರು ತನಗಿರಲೆಂಬ ಮನದಿಂದ ಪಡೆಯನವ
ಸುರಿಸಿರಲು ದುಃಖಿಸದೆ ಆಸಕ್ತಿ ಇರದಿಹನು ೧೨,೧೮೦

ಯೋಗಿ ಈಪರಿ ನಿರಾಸಕ್ತಿಯಲಿ ಸಂಗ್ರಹಿಸಿ
ಆಗಿರೆ ಅನಾಸಕ್ತ ದಾನ-ವಿತರಣೆ ಗೈಯೆ
ತನ್ನದೆಂಬುವ ಅಹಮಿಕೆಯ ತೊರೆದು ಸಿರಿಯನ್ನು
ಮುನ್ನ ತ್ಯಜಿಸುವುದ ರವಿಯಿಂದ ತಾ ಕಲಿಯುವನು ೧೨,೧೮೧

ಎರಡನೆಯ ಪಾಠವನ್ನು ಕಲಿವುದಿದೆ **ಸೂರ್ಯನಿಂ**
ನೀರುತುಂಬಿರೆ ಹಲವು ಪಾತ್ರೆಯಲಿ ಪ್ರತಿಫಲಿಸಿ

ನೂರಾರು ಸೂರ್ಯರಿರುವಂತೆ ಭಾಸವಾದಾಗೆ
ಇರುವ ರವಿಯೋರ್ವನೇ ಎಂಬುದದೇ ನಿಜವಿರಲು ೧೨,೧೮೨

ಬೆಳಗೆ ಆತ್ಮನು ತಾನು ವಿವಿಧ ಚರ-ಅಚರದಲಿ
ಹಲವಾರು ಆತ್ಮರಿರುವಂತೆ ಬುದ್ಧಿಗೆ ತಿಳಿಯೆ
ಕೇವಲ ಉಪಾಧಿಯಿಂ ಹೊರತು ಸಹಜವು ಇರದೆ
ಸಾವಿರದಿ ಭೇದಗಳು ಆತ್ಮನೋರ್ವನೆ ಇರಲು ೧೨,೧೮೩

ಅರಸ! ಎಲ್ಲಿಯು ಯಾರ ಜೊತೆಯಲ್ಲಿ ಆಗಲಿ
ಅಧಿಕ ಸ್ನೇಹವ-ಸಂಗ ತೊರೆದು ತಾನಿರಬೇಕು
ಅತಿ ಸ್ನೇಹದಲಿ ದೀನ **ಪಾರಿವಾಳದ** ರೀತಿ
ಅನುಭವಿಸುವರು ಕಥೆಯನೊಂದ ಪೇಳುವೆನಿದಕೆ ೧೨,೧೮೪

"ಒಂದು ಕಾಡಲಿ ದೊಡ್ಡ ಆಲದ ಮರವಿರಲು
ಒಲಿದೊಂದು ಪಾರಿವಾಳವು ಗೂಡ ಕಟ್ಟಿರಲು
ಸತಿ-ಪತಿ ಕಪೋತಗಳು ಪ್ರೀತಿಸಿರೆ ಅತಿಯಾಗಿ
ಜೊತೆಯಲ್ಲೇ ಇರುತಿರಲು ದೇಹ-ಮನ ಒಂದೆನುವೋಲ್ ೧೨,೧೮೫

ಸೇವೆಯಲಿ ಪತಿಯ ಸಂತೋಷಗೊಳಿಸಿರೆ ಸತಿಯು
ವಿವಿಧ ರೀತಿಯೊಳಿಂದ ಪತಿಯು ಸುಖವಿತ್ತಿರಲು
ಸತಿ ಗರ್ಭವತಿಯಾಗಿ ಮೊಟ್ಟೆಗಳನಿಟ್ಟಿರಲು
ಸ್ವಲ್ಪದಿನದಲೆ ಪುಟ್ಟ ಮರಿಗಳಾಗೊಡೆದಿರಲು ೧೨,೧೮೬

ಮರಿಗಳ ಕಲರವವ ಕೇಳಿ ಆನಂದಿಸಿರೆ
ಶರೀರಗಳ ಮುಟ್ಟಿ ಕೋಮಲತೆ ಸವಿದಿರಲು
ಅವುಗಳಾಟಗಳಲ್ಲಿ ಮೈಮರೆತು ಮೆರೆದಿರಲು
ಅವರ ಆಹಾರಕೆನೆ ಸತಿ-ಪತಿಯು ಹೊರಟಿರಲು ೧೨,೧೮೭

ಕಾಡಿನಲ್ಲಿ ಸಂಚರಿಸಿ ಬಹಳ ಕಾಲವ ಕಳೆದು
ಕೂಡಿಸಿಯೆ ಆಹಾರ ಗೂಡ ಬಳಿ ಬಂದಿರಲು
ಬೇಡರವ ಮರಿಗಳನು ಬಲೆಯೊಳಗೆ ಬೀಳಿಸಿರೆ
ನೋಡಿ ತಾಯಿಯ ಮರಿಗಳೆಲ್ಲ ಕೂಗುತಲಿರಲು ೧೨,೧೮೮

ಬುದ್ಧಿಗೆಟ್ಟಿರೆ ಮಾಯೆಯಲಿ ಕಪೋತಿಯು ತಾನು
ಅಧಿಕ ಪ್ರೀತಿಯಲೋಡಿ ಬಲೆಯಲ್ಲಿ ಸಿಲುಕಿರಲು
ಹೊತ್ತು ಕಳೆದರು ಬರದೆ ಪತಿಯು ತಾ ಹುಡುಕಿರಲು
ಪತ್ನಿಯನು-ಮಕ್ಕಳನ್ನು ನೋಡಿರಲು ಬಲೆಯಲ್ಲಿ ೧೨,೧೮೯

ಪ್ರಾಣಕಿಂತಲು ಹೆಚ್ಚು ಪ್ರಿಯರಾದ ಸತಿ-ಸುತರ
ದೈನ್ಯದಲ್ಲಿ ನೋಡಿ ಪತಿ ತಡೆಯದಲೆ ಅಳುತಿರಲು
ನನ್ನ ಪ್ರೇಮವು-ಕಾಮ ಪೂರ್ಣಗೊಳ್ಳದೆ ಇರಲು!
'ನನಗೆ ಒದಗಿದ ಘೋರ ವಿಪದವನೆ ನೋಡಿರಿ! ೧೨,೧೯೦

ಪತಿಯೇ ಪರದೈವವೆಂದರಿತ ಅನುರೂಪಳಿರೆ
ಸತಿಯು ನನ್ನೊಬ್ಬನನೆ ಬಿಟ್ಟು ಮರಿಗಳ ಜೊತೆಗೆ
ಹತ್ತುತಿರೆ ಸ್ವರ್ಗವನು ನಾನೆಂತು ಸಹಿಸಿರಲಿ
ಜೊತೆಯಲ್ಲಿ ಹೋಗುವೆನು ಎನುತ ಬಲೆಯಲಿ ಸಿಲುಕಿ ೧೨,೧೯೧

ತಾನಾಗಿ ಸುರಿದಿರಲು ಅದೃಷ್ಟ ಬೇಡನಿಗೆ
ಮನೆಗೆ ತೆರಳಿದ ಸುಖಿದಿ ಪಕ್ಷಿಸಂಸಾರದೊಡೆ'
ಯದುವೆ! ಈ ಪಕ್ಷಿಯೊಲು ಸಂಸಾರವನ್ನು ಸವಿದು
ನಿಂದು ಗೃಹಕೃತ್ಯದಲೆ ನರಳುವರು ನರರಿನಿತು ೧೨,೯೨

ಯದುವೆ! ನರಜನ್ಮವಿದು ತೆರೆದ ಬಾಗಿಲ ತೆರದಿ
ಸಾಧಿಸಲು ದೊರೆತಿಹುದು ಮುಕ್ತಿ ಸಾಮ್ರಾಜ್ಯವನು
ನಿಂದು ನರ ಜನ್ಮದಲಿ ಪಾರಿವಾಳದ ತೆರದಿ
ಸಂಸಾರದಲಿ ಮುಳುಗೆ 'ಆರೂಢ ಚ್ಯುತ'ರೆನಲು ೧೨,೯೩

....

ಹೀಗೆ ಮುಂದಿನ ಎರಡಧ್ಯಾಯಗಳಲ್ಲೂ ಈ ಇಪ್ಪತ್ನಾಲ್ಕು ಗುರುಗಳ ಕಥೆ ಮುಂದುವರೆದಿದೆ.

ಕನ್ನಡೀಕರಣದ ಕೆಲವು ಗಮನಾರ್ಹ ವಿಶೇಷಗಳು, ಸೂಕ್ಷ್ಮ ವಿಷಯಗಳು

ಆರನೇಯ ಅಧ್ಯಾಯದಲ್ಲಿ, ಮರುದ್ಗಣಗಳು, (ದ್ವಾದಶ) ಆದಿತ್ಯರು, (ಅಷ್ಟ) ವಸುಗಳು (೧೨,೦೬೭-೬೮), ಸಾತ್ವತ - ಪಾಂಚರಾತ್ರ ವಿಧಿ, ವ್ಯೂಹ – ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ (೧೨,೦೭೮), ಅಂಘ್ರಿಶಬ್ದಕ್ಕೆ ಪಾದುಕೆಗಳ ನಿರ್ದೇಶ ಬಹಳ ಸೂಕ್ತ ಮತ್ತು ಸಂಗತ. (೧೨,೦೭೯), ಛಾದಯಂತಃ - ಕಂಠದಿಂದ ಪಾದಗಳ ವರೆಗೆ (ಆಪಾದಚೂಡ)ವೆಂದು (೧೨,೦೮೧), ಕಾಲಃ ಕಲಯತಾಮಹಂ ಎಂಬರ್ಥ (೧೨,೯೦), ಮುಂತಾದವು.

ಏಳನೇಯ ಅಧ್ಯಾಯದಲ್ಲಿ, ಅವಧೂತ ಅಥವಾ ಸನ್ಯಾಸಿ ಎಂದು ಸಾಮಾನ್ಯವಾಗಿ ಹೇಳಿರುವುದು **ಶ್ರೀದತ್ತಾತ್ರೇಯ-ರನ್ನೆಂಬುದು** (ಕೆಲ ವ್ಯಾಖ್ಯಾನಗಳಲ್ಲಿ ಹೀಗಿದೆ) (೧೨,೧೫೨), ಇಪ್ಪತ್ನಾಲ್ಕು ಗುರುಗಳ (೧೨,೧೬೦, ೧೬೧) ಕಥೆಯಲ್ಲಿ ಪ್ರತ್ಯೇಕ ಶಿಕ್ಷಣ, ನೀತಿಸಂದೇಶ ಯೋಗಿಗೆ ಹೊಂದುವಂತೆ ವಿವರಣೆ –

ಅಗ್ನಿಯಿಂದ ಕಲಿಕೆಯ ಬಗ್ಗೆ ಹೇಳುವಾಗ ೫ ಪದ್ಯಗಳಲ್ಲಿ (೧೨,೧೭೧-೭೫) ಬ್ರಹ್ಮವಿದ್ಯೆ ಉಪಾಸಿಸುವ ಯೋಗಿಯ ನೆಲೆ ಮತ್ತು ಮಹಿಮೆ ಬಹಳ ಚೆನ್ನಾಗಿ ವಿವರಿಸಿದೆ. ಪರಬ್ರಹ್ಮವೂ ಅಗ್ನಿಯಂತೆ ಎಂದಾಗ 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಬ್ರಹ್ಮಸೂತ್ರಾರ್ಥ ಬೆಳಗುವುದು. ಭಗವಂತನ ಉಭಯಲಿಂಗತ್ವವೂ, 'ತೇಜೋದಾಸ್ತ್ವಮಸ್ಯಗ್ನೇಃ' ಎಂಬ ಜಗತ್ಕಾರಣತ್ವವೂ ಸೂಚಿತ. ಅಗ್ನಿಯಿಂದ ಕಲಿಯುವ ಎರಡನೇಯ ಪಾಠವಾಗಿ ಅಧ್ಯಾತ್ಮತತ್ತ್ವವನ್ನೂ ಸೊಗಸಾಗಿ ತಿಳಿಸಿದೆ (೧೨,೧೭೮-೭೯).

ಚಂದ್ರನಿಂದ ಕಲಿಕೆಯಲ್ಲಿ, 'ಜಾಯತೇ, ವರ್ಧತೇ, ವಿಪರಿಣಮತೇ, ಉಪಚೀಯತೇ, ಅಪಚೀಯತೇ, ವಿನಶ್ಯತಿ' ಎಂಬ ಷಡ್ಭಾವವಿಕಾರಗಳು ಯಾಸ್ಕ ನಿರುಕ್ತದಲ್ಲೂ, 'ಅಪಕ್ಷಯವಿನಾಶಾಭ್ಯಾಂ ಪರಿಣಾಮರ್ಧಿಯನ್ಮಭಿಃ' ಎಂದು ವಿಷ್ಣು-ಪುರಾಣದಲ್ಲೂ ಹೇಳಿರುವ ಭಾವವಿಕಾರಗಳ ವಿವರಣೆ ಮನೋಜ್ಞವಾಗಿದೆ.

ಪಾರಿವಾಳದಿಂದ ಅರಿಯುವುದರನ್ನು ವಿವರಿಸುತ, ವಿಷ್ಣುಮಾಯೆಯಿಂದ ನಮ್ಮ ಬುದ್ಧಿ ಆವೃತವಾಗಿ ದುಃಖಪರಂಪರೆ ಒದಗುವುದು ಖಚಿತವೆಂದು ತೋರಿಸಿದೆ. ಹೀಗೆ ಅನೇಕ ಕಡೆಗಳಲ್ಲಿ ಸ್ವಾರಸ್ಯವಿದೆ.

ಇಲ್ಲಿ ಐಯ್ಯಂಗಾರರ ಕನ್ನಡೀಕರಣ ಮೂಲದ ಸಂಪೂರ್ಣ ಭಾವವನ್ನು ಅಕ್ಷರಶಃ ತಿಳಿಗನ್ನಡದಲ್ಲಿ ತಪ್ಪದೆ ಮೂಡಿಸುವುದಷ್ಟೇ ಅಲ್ಲದೆ ಬಹಳ ಕಡೆ ಹೆಚ್ಚು ಸೂಕ್ಷ್ಮ ಮಾಹಿತಿ, ಸ್ಪಷ್ಟೀಕರಣಗಳನ್ನೂ ಒದಗಿಸಿ ಅತ್ಯುಪಕಾರಕ-ವಾಗಿದೆ ಎಂದು ತೋರಿಸಲು ಇಷ್ಟು ಪ್ರಸ್ತುತಗೊಳಿಸಲಾಯಿತು.

ಶುಭಮಸ್ತು.